MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 49 | ಭಾನುವಾರ :07-12-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 49 | SUNDAY : 07-12-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ನಾಯಕತ್ವ ಕಿತ್ತಾಟದಲ್ಲಿ ಸರ್ಕಾರ ತರಾಟೆಗೆ ವಿಪಕ್ಷಗಳು ಸಜ್ಜು

**ಬೆಂಗಳೂರು,ಡಿ.6–** ನಾಯಕತ್ವ ಬದಲಾವಣೆ ಗೊಂದಲ, ಸರಕಾರದಲ್ಲಿ ಶೇ.63ರಷ್ಟು ಕಮಿಷನ್ ಕುರಿತು ಉಪಲೋಕಾಯುಕ್ತರ ಹೇಳಿಕೆ, ವಿವಿಧ ಇಲಾಖೆಗಳಲ್ಲಿ ನಡೆದಿರುವ ಭ್ರಷ್ಟಾಚಾರ ಸೇರಿದಂತೆ ಹಲವಾರು ವಿಷಯಗಳನ್ನು ಮುಂದಿಟ್ಟುಕೊಂಡು ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ಮುಗಿಬೀಳಲು ಪ್ರತಿಪಕ್ಷಗಳು ಸಜ್ಜಾಗಿದೆ.

ಸೋಮವಾರದಿಂದ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಲಿರುವ 10 ದಿನಗಳ ಚಳಿಗಾಲದ ಅಧಿವೇಶನದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆಯುವುದು ಬಹುತೇಕ ಖಚಿತ. ಸರ್ಕಾರದ ವೈಫಲ್ಯಗಳನ್ನು ಮುಂದಿಟ್ಟುಕೊಂಡು ಆಡಳಿತ ಪಕ್ಷವನ್ನು ತರಾಟೆಗೆ ತೆಗೆದುಕೊಳ್ಳಲು ಪ್ರತಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಸಜ್ಜಾಗಿದೆ.

ಇದಕ್ಕೆ ಪ್ರತಿಯಾಗಿ ಹಿಂದಿನ ಸರ್ಕಾರಗಳ ಹಗರಣಗಳನ್ನು ಕೆದಕಿ ಪ್ರತಿಪಕ್ಷಗಳ ಅಸ್ತ್ರವನ್ನು ನಿಶಸ್ತ್ರಗೊಳಿಸಲು ಆಡಳಿತ ಪಕ್ಷ ಕೂಡ ಕಾರ್ಯತಂತ್ರ ರೂಪಿಸಿದೆ. ಎರಡೂವರೆ ವರ್ಷಗಳ ಯಶಸ್ಸಿನ ಆಡಳಿತದ ಹುಮಸ್ಸಿನಲ್ಲಿರುವ ರಾಜ್ಯ ಸರ್ಕಾರಕ್ಕೆ ಸೋಮವಾರದಿಂದ 10 ದಿನಗಳ ಕಾಲ ನಡೆಯಲಿರುವ ಬೆಳಗಾವಿ ಚಳಿಗಾಲದ ಅಧಿವೇಶನದ ರೂಪದಲ್ಲಿ ಅಗ್ನಿ ಪರೀಕ್ಷೆ ಎದುರಾಗಿದೆ. ಅದೇ ರೀತಿ ಗ್ಯಾರಂಟಿಗಳ ಅನುಷ್ಠಾನದಲ್ಲಿನ ಲೋಪ, ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡದಿರುವುದು, ಅಧಿಕಾರ ಹಂಚಿಕೆಯಂಥ ಅಸ್ತ್ರಗಳೊಂದಿಗೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಮುಂದಾಗಿವೆ ಎಂದು ತಿಳಿದುಬಂದಿದೆ.

ಪ್ರತಿಪಕ್ಷಗಳು ಪ್ರಸ್ತಾಪಿಸುವ ಯಾವ್ಯಾವ ವಿಚಾರಗಳ ಬಗ್ಗೆ ಯಾರೆಲ್ಲ ಸಚಿವರು ಉತ್ತರಿಸಬೇಕು. ಅವರಿಗೆ ಪೂರಕವಾಗಿ ಯಾರೆಲ್ಲ ಶಾಸಕರು ಸಾಥ್ ನೀಡಬೇಕು ಎಂಬ ಹೊಣೆಗಾರಿಕೆಯನ್ನೂ ನಿಗದಿ ಮಾಡಲಾಗಿದೆ. ಹೀಗಾಗಿ ಆಡಳಿತ–ಪ್ರತಿಪಕ್ಷಗಳ ಆರೋಪ–ಪ್ರತ್ಯಾರೋಪಗಳ ಮೂಲಕ ಚಳಿಗಾಲದ ಅಧಿವೇಶನವು ಬಿಸಿಯೇರುವ ಸಾಧ್ಯತೆಯಿದೆ.

ಈಗಾಗಲೇ ಪ್ರತಿಪಕ್ಷಗಳನ್ನು ಸದನದಲ್ಲಿ ಹೇಗೆ ಕಟ್ಟಿ ಹಾಕಬೇಕು ಎಂಬುದರ ಕುರಿತು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತಮ ಸಚಿವರು ಮತ್ತು ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಗಾಗಲೇ ಅಗತ್ಯ ಮಾರ್ಗದರ್ಶನ ನೀಡಿದ್ದಾರೆ. ಸದನದಲ್ಲಿ ಒಗ್ಗಟ್ಟು ಪ್ರದರ್ಶಿಸಿ ಪ್ರತಿಪಕ್ಷಗಳನ್ನು ಉತ್ತರದಿಂದಲೇ ಕಟ್ಟಿ ಹಾಕಬೇಕೆಂದು ಇಬ್ಬರೂ ನಾಯಕರು ಸೂಚನೆ ಕೊಟ್ಟಿದ್ದಾರೆ.



ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಇಲಾಖೆವಾರು ಹಗರಣಗಳ ಪಟ್ಟಿಯಲ್ಲಿ ಸಿದ್ಧ ಮಾಡಿಕೊಂಡಿರುವ ಕಾಂಗ್ರೆಸ್ ಪ್ರತಿ ಪಕ್ಷಗಳು ಎತ್ತುವ ಪ್ರತಿಯೊಂದು ಆರೋಪಕ್ಕೂ ಪ್ರತ್ಯುತ್ತರ ನೀಡುವಂತೆ ತಮ ಸಂಪುಟದ ಸಹೋದ್ಯೋಗಿಗಳಿಗೆ ಮೌಖಿಕವಾಗಿ ಸೂಚಿಸಿದ್ದಾರೆ.ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ್ ಬೊಮಾಯಿ ಅಧಿಕಾರವಧಿಯಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಸರ್ಕಾರವೇ ನೇಮಿಸಿದ್ದ ತನಿಖೆ ಆಯೋಗ ವರದಿಯಲ್ಲಿ ಇದು ಕಂಡುಬಂದಿದೆ ಹೀಗಾಗಿ ಪ್ರತಿಪಕ್ಷಗಳು ಯಾವುದೇ ವಿಷಯ ಪ್ರಸ್ತಾಪ ಮಾಡಿದರೆ,ಅದಕ್ಕೆ ಪ್ರತಿಯಾಗಿ ದಾಖಲೆಗಳನ್ನು ಮುಂದಿಟ್ಟುಕೊಂಡು ಉತ್ತರ ನೀಡುವಂತೆ ಸಿಎಂ ಸೂಚನೆ ಕೊಟ್ಟಿದ್ದಾರೆ.

**ಮಹತ್ವದ ಮಸೂದೆಗಳ ಮಂಡನೆ**–ಈ ಬಾರಿಯ ಅಧಿವೇಶನದಲ್ಲಿ ಸರ್ಕಾರ ಕೆಲವು ಮಹತ್ವದ ಮಸೂದೆಗಳನ್ನು ಮಂಡನೆ ಮಾಡಲಿದೆ. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಸೂದೆ ಮಂಡನೆಗೆ ಆಡಳಿತಾಕ ಅನುಮೋದನೆ ನೀಡಲಾಗಿದೆ.

ಬಹು ಮುಖ್ಯವಾಗಿ ಜನಾಂಗೀಯ ನಿಂದನೆ, ಭಾಷೆ, ಜನಸ್ಥಳ, ಜಾತಿ, ಧರ್ಮ ಆಧರಿಸಿ ದ್ವೇಷದ ಅಪರಾಧ ಮತ್ತು ದ್ವೇಷ ಭಾಷಣ ಮಾಡುವುದನ್ನು ತಡೆಗಟ್ಟುವುದು ಮತ್ತು ಸಾಮಾಜಿಕ ಬಹಿಷ್ಕಾರ ತಡೆಗಟ್ಟುವಿಕೆ, ನಿಷೇಧ, ಪರಿಹಾರ ಮತ್ತು ತಪ್ಪು ಮಾಹಿತಿ ಮತ್ತು ನಕಲಿ ಸುದ್ದಿ (ನಿಷೇಧ) ಮಸೂದೆ ಸೇರಿದಂತೆ ಒಟ್ಟು 21 ವಿಧೇಯಕಗಳನ್ನು ಮಂಡಿಸಲು ಕಾಂಗ್ರೆಸ್ ಸರ್ಕಾರವು ಸಿದ್ಧತೆ ನಡೆಸಿದೆ.

(2ನೇ ಪುಟಕ್ಕೆ)

## 2ನೇ ಆಯುರ್ವೇದ ವಿಶ್ವ ಸಮೇಳನ ಅಂಗವಾಗಿ ಪಟ್ಟಣಕ್ಕೆ ಆಗಮಿಸಿದ ಆಯುರ್ವೇದ ರಥಯಾತ್ರೆ



ಯುವಮಾರ್ಗ ಸುದ್ದಿ

**ಮಾನ್ವಿ,ಡಿ.6–** ಪಟ್ಟಣದಲ್ಲಿ ಕರ್ನಾಟಕ ಸರ್ಕಾರ ಅಯುಷ್ ಇಲಾಖೆ ಹಾಗೂ ಡಾ.ಖಾಜೆ, ಆಯುರ್ವೇದಿಕ್ ಚಾರಿಟಬಲ್ ಫೌಂಡೇಶನ್ ಸಹಯೋಗ ದಲ್ಲಿ 2 ನೇ ಆಯುರ್ವೇದ ವಿಶ್ವ ಸಮೇಳನ ಅಂಗವಾಗಿ ಪಟ್ಟಣದಲ್ಲಿ ನಡೆದ ಆಯುರ್ವೇದ ರಥಯಾತ್ರೆಗೆ ಕೆ.ಪಿ.ಎಸ್. ವಿ,ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆಯ ಅಧ್ಯಕ್ಷರು ಹಾಗೂ ಕಲ್ಮಠ ಶ್ರೀವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಚಾಲನೆ ನೀಡಿ ಮಾತನಾಡಿ ಪ್ರಕೃತಿಯ ಜೋತೆಗೆ ಹೇಗೆ ಬದುಕಬಹುದು ಎನ್ನುವುದನ್ನು ತಿಳಿಸಿಕೊಟ್ಟಿರುವುದು ನಮ್ಮ ಆಯುರ್ವೇದ ವೈದ್ಯಪದ್ಧತಿ ಪ್ರಾಚೀನ ಕಾಲದಲ್ಲಿ ಅಧುನಿಕ ವೈದ್ಯಪದ್ಧತಿ ಪರಿಚಾಯ ವಿಲ್ಲದೆ ಇರುವ ಸಮಯದಲ್ಲಿ ನಮ್ಮ ಜನರಿಗೆ ಹಲವು ಕಾಯಿಲೆಗಳಿಂದ ಪರಿಹಾರವನ್ನು ಪಡೆಯುವುದಕ್ಕೆ ನೆರವಾಗಿದ್ದು ನಮ್ಮ ಪ್ರಾಚೀನ ಆಯುರ್ವೇದ ವೈದ್ಯಪದ್ಧತಿ ಇಂತಹ ಆಯುರ್ವೇದ ವೈದ್ಯಪದ್ಧತಿಯನ್ನು ವಿಶ್ವಕ್ಕೆ ಪರಿಚಯಿಸುವ ಉದ್ದೇಶದಿಂದ 2 ನೇ ಆಯುರ್ವೇದ ವಿಶ್ವ ಸಮೇಳನವನ್ನು ಹಮ್ಮಿಕೊಳ್ಳಲಾಗಿದ್ದೆ ವಿಶ್ವದ ಎಲ್ಲಾ ಜನರಿಗೂ ಕೂಡ ನಮ್ಮ ಆಯುರ್ವೇದ ವೈದ್ಯಪದ್ಧತಿ ಪರಿಚಾಯವಾಗಿ ಎಲ್ಲಾರಿಗೂ ಕೂಡ ಉತ್ತಮ ಆರೋಗ್ಯ ದೊರೆಯಲಿ ಎಂದು ತಿಳಿಸಿದರು.

ಆಯುರ್ವೇದ ರಥಯಾತ್ರೆಯ ದಕ್ಷಿಣ ಕರ್ನಾಟಕ ಉಸ್ತುವಾರಿಗಳಾದ ಡಾ.ಅದರ್ಶಭಟ್ ಮಾತನಾಡಿ ಸ್ವಸ್ಥ ಭವಿಷ್ಯಕ್ಕಾಗಿ ಆಯುರ್ವೇದ ಎನ್ನುವ ಸಂದೇಶವನ್ನು ಹೊತ್ತು ಬೆಂಗಳೂರಿನ ಅರಮನೆ ಮೈದಾನದಲ್ಲಿ ಡಿ.25ರಿಂದ ಡಿ.28 ರವರೆಗೆ 2 ನೇ ಆಯುರ್ವೇದ ವಿಶ್ವ ಸಮೇಳನ ನಡೆಯಲಿದೆ .ಕಾರ್ಯಕ್ರಮದಲ್ಲಿ ಸುಮಾರು 6ಲಕ್ಷ ಜನರು ,6ಸಾವಿರ ಗಣ್ಯರು,ದೇಶದ ವಿವಿಧ ಭಾಗಗಳಿಂದ ಆಗಮಿಸಲಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳ ಆಯುರ್ವೇದ ಮೆಡಿಕಲ್ ಕಾಲೇಜ್‌ಗಳ ವೈದ್ಯರು ಹಾಗೂ ವಿದ್ಯಾರ್ಥಿಗಳು,ಭಾಗವಹಿಸಲಿದ್ದಾರೆ. ತಜ್ಞರಿಂದ ವಿವಿಧ ವಿಷಗಳ ಸಂಶೋಧನೆಗಳಿಗೆ ಸಂಬಂದಿಸಿದಂತೆ ವಿಷಯ ಮಂಡನೆ ನಡೆಯಲಿದೆ. ಸಂಶೋಧಾನರ್ಥಿಗಳಿಂದ ಸಂಶೋಧನ ಪ್ರಬಂದಗಳ ಮಂಡನೆ ನಡೆಯಲಿದೆ, ಹಾಗೂ 2047 ಕ್ಕೆ ಆಯುರ್ವೇದ ವಿಷಯದ ಕುರಿತು ವಿಷಯವನ್ನು ತಜ್ಞರು ಮಂಡಿಸಲಿದ್ದಾರೆ. ವಿವಿಧ ಆಯುರ್ವೇದ ಕುರಿತು ಸ್ಪರ್ಧೆಗಳಿಗೆ 20 ಲಕ್ಷದವರೆಗೆ ಬಹುಮಾನಗಳನ್ನು ಗೇಲುವ ಅವಕಾಶವಿದೆ. ಹಾಗೂ ಸ್ವದೇಶಿ ಆರೋಗ್ಯ ಪೂರ್ಣ ಆಹಾರದ ಕುರಿತು ಆಹಾರ ಮೇಳ,ಲೇಸರ್ ಶೋ,ಸ್ವದೇಶಿ ಮೇಳ ಜೋತೆಗೆ ಚಲನಚಿತ್ರ ಹಾಗೂ ಕಿರುತೆರೆಯ ನಟ,ನಟಿಯರಿಂದ ಮನೋರಂಜನೆ ಕಾರ್ಯಕ್ರಮ, ಮಕ್ಕಳಿಗಾಗಿ ಆನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಆಯುರ್ವೇದ ವೈದ್ಯರು ಹಾಗೂ ವಿದ್ಯಾರ್ಥಿಗಳು, ಹಾಗೂ ಸಾರ್ವಜನಿಕರು ಭಾಗವಹಿಸಿ ಸಮ್ಮೇಳನದ ಪ್ರಯೋಜನೆ ಪಡೆಯುವಂತೆ ಕೋರಿದರು.

ಪಟ್ಟಣದ ವಾಲ್ಮೀಕಿ ವೃತ್ತದಿಂದ ಕೆ.ಪಿ.ಎಸ್. ವಿ,ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆಯ ವರೆಗೆ ನಡೆದ ಆಯುರ್ವೇದ ರಥಯಾತ್ರೆಯಲ್ಲಿ ನೀರಮಾನ್ವಿ ಶ್ರೀ ಭಕ್ತ ಕನಕದಾಸ ಡೊಳ್ಳಿನ ನಬಸಂಘದ ಕಲಾವಿದರು ಸೇರಿದಂತೆ ವಿವಿಧ ಜನಪದ ಕಲಾ ತಂಡಗಳೊಂದಿಗೆ ಆಯುರ್ವೇದ ಕಾಲೇಜಿನ ವೈದ್ಯರು ಹಾಗೂ ವೈದ್ಯ ವಿದ್ಯಾರ್ಥಿಗಳು ಸಾರ್ವಜನಿಕರು ಭಾಗವಹಿಸಿದರು.

ಕೆ.ಪಿ.ಎಸ್.ವಿ,ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆಯ ಪ್ರಾಚಾರ್ಯರಾದ ಡಾ,ಜೀವನೇಶ್ವರಯ್ಯ, ಡಾ.ಅವೇಜ್ ಶೇಟ್,ಡಾ.ವಿಶ್ವೇಶ್ವರಯ್ಯಮಠ, ಡಾ.ಶವರಾಜ ಒಡೆಯರ್,ಡಾ. ಮಮತ,ಡಾ.ಅಪರ್ಣ, ಡಾ.ಶಂಕರನಂದ, ಡಾ.ಪವನ್‌ದಾನಿ, ಡಾ.ಶ್ರೀಕಾಂತ ಕುಲಕರ್ಣಿ,ಡಾ.ಶರಣಮ್ಮ, ಡಾ.ಹಂಪಮ್ಮ ಸೇರಿದಂತೆ ವೈದ್ಯ ಉಪನ್ಯಾಸಕರು ಹಾಗೂ ವೈದ್ಯ ವಿದ್ಯಾರ್ಥಿಗಳು ಭಾಗವಹಿಸಿದರು.

## ಅಕ್ರಮ ಮರಳು ಎತ್ತುವಳಿ ದಾಸ್ತನಿನ ಮೇಲೆ ದಾಳಿ ನಡೆಸಿದ ತಹಸೀಲ್ದಾರ ಭೀಮರಾಯ ಬಿ.ರಾಮಸಮುದ್ರ

ಯುವಮಾರ್ಗ ಸುದ್ದಿ

**ಮಾನ್ವಿ,ಡಿ.6–**ತಾಲೂಕಿನ ಚಿಕಲಪರ್ವಿ ಗ್ರಾಮದ ಹೊರವಲಯದ ನವಗ್ರಾಮದ ಹತ್ತಿರ ತುಂಗಾಭದ್ರ ನದಿ ಪಾತ್ರದಿಂದ ಅಕ್ರಮವಾಗಿ ಅಕ್ರಮ ಮರಳು ಎತ್ತುವಳಿ ಮಾಡಿ ದಾಸ್ತಾನು ಮಾಡಿರುವ ಖಚಿತ ಮಾಹಿತಿ ಮೇರೆಗೆ ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ಗೋಪಿಕೃಷ್ಣ ಕಾರ್ಯಚಾರಣೆ ನಡೆಸಿ ಅಕ್ರಮ ಮರಳು ದಾಸ್ತಾನು ವಶಪಡಿಸಿಕೊಂಡ ಘಟನೆ ಶುಕ್ರವಾರ ನಡೆದಿದ್ದೆ.

ನಂತರ ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ ಅಕ್ರಮ ಮರಳು ದಾಸ್ತನು ನಡೆದ ಸ್ಥಳದ ಸುತ್ತ–ಮುತ್ತ ವಿಚಾರಿಸಿದಾಗ ಕೃತ್ಯದಲ್ಲಿ ಭಾಗಿಯಾದವರು ಪತ್ತೆ ಯಾಗದೆ ಇರುವುದರಿಂದ ವಶಪಡಿಸಿಕೊಂಡ ಆಕ್ರಮ ಮರಳನ್ನು ಅವಶ್ಯಕತೆ ಲಭ್ಯತೆಯನ್ನು ಆಧಾರಿಸಿ ಭಾರತಿಯ ರೈಲ್ವೆಯ ಕಾಮಗಾರಿಗೆ ಸರ್ಕಾರಕ್ಕೆ ಹಣವನ್ನು ಪಾವತಿಸಿಕೊಂಡು ನಿಯಮ ಅನುಸಾರವಾಗಿ ನೀಡಲಾಗಿದೆ ಎಂದು



ತಿಳಿಸಿದರು.ಸ್ಥಳದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು, ಕಂದಾಯ ಇಲಾಖೆ ಅಧಿಕಾರಿಗಳು, ಪೋಲಿಸ್ ಇಲಾಖೆ ಅಧಿಕಾರಿಗಳು ಸೇರಿದಂತೆ ಇನ್ನಿತರರು ಇದ್ದರು

## ಮಹಾ ಪರಿನಿರ್ವಾಣ ದಿನ: ಸಂವಿಧಾನ ಶಿಲ್ಪಿಗೆ ಗಣ್ಯರಿಂದ ನಮನ

ಯುವಮಾರ್ಗ ಸುದ್ದಿ

**ರಾಯಚೂರು,ಡಿ.6–**ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನವನ್ನು ನಗರದ ಡಾ.ಬಿ. ಆರ್.ಅಂಬೇಡ್ಕರ್ ವೃತ್ತದಲ್ಲಿ ಡಿಸೆಂಬರ್ 6ರಂದು ಆಚರಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಾನಗರ ಪಾಲಿಕೆ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ನಡೆದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಬೀದರ್ ಜಿಲ್ಲೆಯ ಬೌದ್ಧ ಧರ್ಮದ ಗುರುಗಳಾದ ಬಂತೇಜಿ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕೃಷಿ ಉತ್ಪನ್ನ



ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಎಂ.ಪುಟ್ಟಮಾದಯ್ಯ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಸಿಂಧೂ ರಘು. ಹೆಚ್.ಎಸ್, ಪರಿಶಿಷ್ಟ ಕಲ್ಯಾಣ ವರ್ಗಗಳ ಕಲ್ಯಾಣಾಧಿಕಾರಿಗಳಾದ ಶಿವಮಾನಪ್ಪ, ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಸಹಾಯಕ ನಿರ್ದೇಶಕರಾದ ಶಿವಪ್ಪ, ಪರಿಶಿಷ್ಟ ಕಲ್ಯಾಣ ವರ್ಗಗಳ ತಾಲೂಕು ಕಲ್ಯಾಣಾಧಿಕಾರಿಗಳಾದ ರುಕ್ಮಿಣೀ ಬಾಯಿ, ಸಮಾಜ ಕಲ್ಯಾಣ ಇಲಾಖೆಯ ಪತ್ರಾಂಕಿತ ವ್ಯವಸ್ಥಾಪಕರಾದ ರವಿ ಎಂ. ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ಸಾಮಾಜಿಕ,ಶೈಕ್ಷಣಿಕ ಸಮೀಕ್ಷೆ ಗೌರವಧನ ಬಿಡುಗಡೆಗೆ ಒತ್ತಾಯಿಸಿ ಎನ್ಪಿಎಸ್ ನೌಕರರ ಸಂಘ ಮನವಿ

ಯುವಮಾರ್ಗ ಸುದ್ದಿ

**ಮಾನ್ವಿ,ಡಿ.6–** ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ– 2025ರ ಗಣತಿ ಕಾರ್ಯದ ಮೊದಲ ಕಂತಿನ ಗೌರವ ಧನವನ್ನು ಗಣತಿದಾರರ ಖಾತಗೆ ಜಮಾ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಎನ್ಪಿಎಸ್ ನೌಕರರ ಸಂಘದಿಂದ ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯವನ್ನು ತಾಲೂಕಿನಲ್ಲಿ ಶಿಕ್ಷಕರು ಅತ್ಯಂತ ಯಶಸ್ವಿಯಾಗಿ ಪೂರ್ಣಗೊಳಿಸಿ ಜಿಲ್ಲೆಗೆ ಮಾದರಿಯಾಗಿ ದ್ದಾರೆ. ಈಗಾಗಲೇ ಸಮೀಕ್ಷೆ ಕಾರ್ಯದ ಗೌರವ ಧನದ ಅನುದಾನವನ್ನು ಸರ್ಕಾರ ರಾಯಚೂರು ಜಿಲ್ಲೆಗೆ ಬಿಡುಗಡೆಗೊಳಿಸಿದ್ದು ಕೂಡಲೇ ಜಿಲ್ಲಾಡಳಿತವು ಗೌರವ ಧನವನ್ನು ಶೀಘ್ರವೇ ಸಮೀಕ್ಷೆ ನಡೆಸಿದ



ಗಣತಿದಾರರ ಮತ್ತು ಮೇಲ್ವಿಚಾರಕರ ಖಾತೆಗಳಿಗೆ ಜಮಾ ಮಾಡಬೇಕೆಂದು ಒತ್ತಾಯಿಸಿದರು. ನಂತರತಹಸೀಲ್ದಾರರು ಸಮೀಕ್ಷೆಯ ಗೌರವಧನವನ್ನು ಕೂಡಲೇ ಬಿಡುಗಡೆ ಮಾಡುವ ಭರವಸೆಯನ್ನು ನೀಡಿದರು.

ಈ ಸಂದರ್ಭದಲ್ಲಿ ಎನ್ಪಿಎಸ್ ಸಂಘದ ತಾ.ಅಧ್ಯಕ್ಷ ಸುರೇಶ ಕುಮಾರ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ ಮಳ್ಳಿ, ಹಿಂದುಳಿದ ವರ್ಗಗಳ ನೌಕರರ ಸಂಘದ ಅಧ್ಯಕ್ಷ ವೈ. ಶ್ರೀನಿವಾಸ,ಮಾದಿಗ ನೌಕರರ ಸಂಘದ ಅಧ್ಯಕ್ಷ ಸುರೇಶ ಜಗ್ಲಿ ಹಾಗೂ ಹಿರಿಯ ಶಿಕ್ಷಕರಾದ ಬೀರಪ್ಪ , ಶಿವಾರಾಜ ,ವೈ ಶ್ರೀನಿವಾಸ, ಆಂಜನೇಯ, ನಾಗರಾಜ್, ರಾಘವೇಂದ್ರ, ವಿರುಪಾಕ್ಷಿ, ಮೌನೇಶ, ರಘುನಂದನ್, ಕೊಂಡರೆಡ್ಡಿ, ಕೃಷ್ಣಮೂರ್ತಿ,ಅರವ ವೆಂಕಟ ಕೃಷ್ಣಯ್ಯ, ಆಂಜನೇಯ ಯಾದವ್ , ರವಿ ಹುಲಿಯಾಪುರ, ಹರ್ಷವರ್ಧನ, ಬಸನಗೌಡ ಪೊಲೀಸ್ ಪಾಟೀಲ್, ರಾಘವೇಂದ್ರ, ಸೂಗುರೇಶ ಪಾಟೀಲ್ ಹದ್ದಿನಾಳ ಉಪಸ್ಥಿತರಿದ್ದರು

## ಮೊದಲನೇಯ ಪುಟದಿಂದ

# ನಾಯಕತ್ವ ಕಿತ್ತಾಟದಲ್ಲಿ ಸರ್ಕಾರ ತರಾಟೆಗೆ ವಿಪಕ್ಷಗಳು ಸಜ್ಜು

**ಮಂಡನೆಯಾಗಲಿರುವ ವಿಧೇಯಕಗಳ ಪಟ್ಟಿ**–ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ )ವಿಧೇಯಕ 2025, ಬಯಲು ಸೀಮೆ ಪ್ರಾಧಿಕಾರ (ತಿದ್ದುಪಡಿ) 2025, ಕರ್ನಾಟಕ ಕಟ್ಟಡ ಉಲ್ಲಂಘನೆ ನಿಯಂತ್ರಣ ವಿಧೆಯಕ ಕರ್ನಾಟಕ ಅಪಾರ್ಟ್‌ಮೆಂಟ್ 2025, ಮಾಲೀಕತ್ವ ನಿಯಂತ್ರಣ) ಮಸೂದೆ 2025, ಶ್ರಿಘಾಟಿ ಸುಬ್ರಮಣ್ಯ ಕ್ಷೇತ್ರ ಪ್ರಾಧಿಕಾರ (ತಿದ್ದುಪಡಿ) 2025ರ ವಿಧೇಯಕ, ಚಂದ್ರಗುತ್ತಿ ಶ್ರಿರೇಣುಕಾಂಬ ಕ್ಷೇತ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ )ವಿಧೇಯಕ 2025, ಬಯಲು ಸೀಮೆ ಪ್ರಾಧಿಕಾರ (ತಿದ್ದುಪಡಿ) 2025, ಕರ್ನಾಟಕ ಕಟ್ಟಡ ಉಲ್ಲಂಘನೆ ನಿಯಂತ್ರಣ ವಿದೇಯಕ, ಮಾಲೀಕತ್ವ ನಿಯಂತ್ರಣ) ಮಸೂದೆ 2025, ಶ್ರಿಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ (ತಿದ್ದುಪಡಿ) 2025, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ದತ್ತಿ (ತಿದ್ದುಪಡಿ) ವಿಧೇಯಕ, ಕರ್ನಾಟಕ ಗೃಹ ಕೆಲಸಗಾರರ (ಸಾಮಾಜಿಕ ಭದ್ರತೆ, ಕಲ್ಯಾಣ (ತಿದ್ದುಪಡಿ), ಸರ್ಕಾರಿ ಸಂಸ್ಥೆಗಳಲ್ಲಿ ಖಾಸಗಿ ಹೊರಗುತ್ತಿಗೆ ನಿಷೇಧ ವಿಧೇಯಕ, ಸನ್ನತಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಮಂಡಿಸಲಿದೆ.

ಕರ್ನಾಟಕ ದಿನಗೂಲಿ ನೌಕರರ ಕಲ್ಯಾಣ (ತಿದ್ದುಪಡಿ ) ವಿಧೇಯಕ, ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ ) 2025, ಕರ್ನಾಟಕ ಪರಿಶಿಷ್ಟ ಜಾತಿಗಳು ( ಉಪ ಪಂಗಡಗಳ ಮೀಸಲಾತಿ), ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ (ಎರಡನೇ ತಿದ್ದುಪಡಿ), ವಿಧೇಯಕ, ಕರ್ನಾಟಕದಲ್ಲಿ ಗೋಹತ್ಯೆ ತಡೆಗಟ್ಟುವಿಕೆ ಮತ್ತು ಗೋ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, ತಪ್ಪು ಮಾಹಿತಿ ಮತ್ತು ನಕಲಿ ಸುದ್ದಿ (ನಿಷೇಧ) ಮಸೂದೆಯೂ ಸೇರಿದೆ.

ದ್ವೇಷ ಭಾಷಣವು ದೇಶದ ಜಾತ್ಯತೀತ ಸಂರಚನೆಗೆ ಮಾಡುವಷ್ಟು ಸಮರ್ಥವಾಗಿರುವ ಗಂಭೀರ ಅಪರಾಧ ಎಂದು ಸುಪ್ರಿಂ ಕೋರ್ಟ್ ಇತ್ತೀಚೆಗಷ್ಟೆ ವ್ಯಾಖ್ಯಾನಿಸಿತ್ತು. ಜತೆಗೆ ಯಾವುದೇ ದೂರು ದಾಖಲಾಗದೆ ಇದ್ದರೂ ದ್ವೇಷ ಭಾಷಣ ವಿರುದ್ಧ ಪ್ರಕರಣಗಳನ್ನು ದಾಖಲಿಸುವಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿತ್ತು. ಈ ಬೆಳವಣಿಗೆಗಳ ಬೆನ್ನಲ್ಲೆ? ಇದೀಗ ರಾಜ್ಯ ಕಾಂಗ್ರೆಸ್? ಸರ್ಕಾರವು ದ್ವೆ?ಷ ಅಪರಾಧಗಳು ಮತ್ತು ದ್ವೆ?ಷ ಭಾಷಣ ತಡೆಗಟ್ಟುವಿಕೆ ಮತ್ತು ಶಿಕ್ಷಿಸುವ ವಿಧೇಯಕವನ್ನು ರೂಪಿಸಿದೆ.

ರಾಜ್ಯದಲ್ಲಿ ಯಾರೇ ವ್ಯಕ್ತಿಯು ತನ್ನ ಸಮುದಾಯದ ಯಾರೇ ವ್ಯಕ್ತಿಯ ಮೇಲೆ ಯಾವುದೇ ರೀತಿಯ ಸಾಮಾಜಿಕ ಬಹಿಷ್ಕಾರವನ್ನು ಹೇರುವುದು ಅಥವಾ ಹೇರಲು ಕಾರಣಕರ್ತನಾದರೇ ಅಥವಾ ಸಾಮಾಜಿಕ ಬಹಿಷ್ಕಾರವನ್ನು ಆಚರಿಸಿರುವುದು ಸಾಬೀತಾದರೇ ಅಂತಹ ವ್ಯಕ್ತಿಗಳ ವಿರುದ್ಧ 7 ವರ್ಷ ಜೈಲು ಶಿಕ್ಷೆ ಅಥವಾ ಒಂದು ಲಕ್ಷ ರೂ. ಜುಲಾನೆ ವಿಧಿಸಲಿದೆ.

# ಪಲ್ಸ್ ಪೋಲಿಯೊ ಗುರಿ ಸಾಧಿಸಿ ಪೋಲಿಯದಿಂದ ಮಕ್ಕಳು ವಂಚಿತರಾಗಬಾರದು ತಹಸೀಲ್ದಾರ ಅರುಣು




ಯುವಮಾರ್ಗ ಸುದ್ದಿ

**ಸಿಂಧನೂರು. ಡಿ. 6–** ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಎಲ್ಲಾ ಇಲಾಖೆಯ ಅಧಿಕಾರಿಗಳು ಸಮನ್ವಯತೆ ಯಿಂದ ಕೆಲಸ ಮಾಡುವ ಮೂಲಕ ಪಲ್ಸ್ ಪೋಲಿಯೊ ಮುಕ್ತ ತಾಲುಕನ್ನಾಗಿ ಮಾಡಬೇಕು ಎಂದು ತಹಸೀಲ್ದಾರ ಅರುಣ ಹೆಚ್ ದೇಸಾಯಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಂದು ತಹಸೀಲ್ದಾರ ಕಚೇರಿಯಲ್ಲಿ ಕರೆದ ಪಲ್ಸ್ ಪೋಲಿಯೊ ಕಾರ್ಯಕ್ರಮದ ತಾಲುಕಾ ಮಟ್ಟದ ಟಾಸ್ಕ್ ಪೊರ್ಸ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಆಯಾ ಗ್ರಾಮ ಪಂಚಾಯ್ತಿ ಪಿಡಿಒಗಳು ಗ್ರಾಮದಲ್ಲಿರುವ ದೇವಸ್ಥಾನ ಮೈಕ್ ಮೂಲಕ ಹಾಗೂ ಡಂಗೂರ ಬಾರಿಸುವ ಮುಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಹಾಗೂ ನಗರಸಭೆ ಕಸದ ವಾಹನದ ಮೂಲಕ ಸಹ ಪ್ರಚಾರ ಮಾಡಬೇಕು ಎಂದರು .

ಬಸ ನಿಲ್ದಾಣ. ರೈಲ್ವೆ ಟೇಷನ್ ಗಳಲ್ಲಿ ಪೋಲಿಯೊ ಬೂತ ಮಾಡಿ ಮಕ್ಕಳಿಗೆ ಪೋಲಿಯೊ ಹಾಕಬೇಕು ಯಾವ ಮಗು ಸಹ ಪೋಲಿಯೊ ದಿಂದ ವಂಚಿತ ರಾಗದಂತೆ ನೋಡಿ ಕೊಳ್ಳುವ ಜವಾಬ್ದಾರಿ ಆರೋಗ್ಯ ಇಲಾಖೆ ಜೋತಗೆ ಎಲ್ಲಾ ಇಲಾಖೆಯ ಅಧಿಕಾರಿಗಳ ಜವಾಬ್ದಾರಿ ಯಾಗೀದೆ ಎನ್ನುವದನ್ನು ಮರೆಯಬಾರದು ಎಂದರು .

ಡಿಸೆಂಬರ್ 21 ರಿಂದ 24 ವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮ ಇರುತ್ತದೆ ಆದ್ದರಿಂದ ಅಂದು ಯಾವದೆ ಕಾರಣಕ್ಕೂ ವಿದ್ಯುತ್ ಸಂಪರ್ಕ ಕಟ್ ಯಾಗದಂತೆ ನೋಡಿಕೊಳ್ಳಬೇಕು ಎಂದು ಜೆಸ್ಕಾಂ ಅಧಿಕಾರಿಗಳಗೆ ಸೂಚನೆ ನೀಡಿ ಎಲ್ಲಾ ಅಂಗನವಾಡಿ ಕೇಂದ್ರ ಗಳಲ್ಲಿ ಕಡ್ಡಾಯವಾಗಿ ಪೋಲಿಯೊ ಬೂತ ಮಾಡಬೇಕು ಎಷ್ಟು ಪ್ರಗತಿ ಪಾಗಿದೆ ಎನ್ನುವ ಮೇಲೆ ಉಸ್ತುವಾರಿ ಯನ್ನು ಅಂಗನವಾಡಿ ಸೂಪರ ವೈಜರ ವರದಿ ತೆಗೆದುಕೊಂಡು ನನಗೆ ಕೋಡಬೇಕು ಅಲಕ್ಷೆ ಮಾಡಬಾರದು ಎಂದು ಸುಪರ ವೈಜರಗಳಿಗೆ ತಾಕೀತು ಮಾಡಿದರು.

ತಾ. ಪ.ಇಒ ಚಂದ್ರಶೇಖರ ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ .ಬಿಇಓ ಬಸಲಿಂಗಪ್ಪ ಜವಳಗೇರಾ ಟಿ ಹೆಚ್ಓ ಡಾ ಅಯ್ಯನಗೌಡ. ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ ಸುರೇಶ. ಡಾ ಮೇರಿ. ಡಾ ನಾಗರಾಜ ಡಾ. ಶ್ವೆತಾಂಬರಿ.ಹಿರಿಯ ಆರೋಗ್ಯ ನಿರೀಕ್ಷರಾದ ರಂಗನಾಥ ಗುಡಿ ಸಂಗನಗೌಡ ಪಾಟೀಲ. ಕ್ಷೇತ್ರ ಆರೋಗ್ಯ ಶಿಕ್ಷಾಣಾದಿಕಾರಿಗಳಾದ ಬಾಲಪ್ಪ ನಾಯಕ. ಗೀತಾ ಹಿರೆಮಠ

ಜೇಸ್ಕಾ. ಸಿಡಿಪಿಓ. ಸಾರಿಗೆ ಇಲಾಖೆ. ಕಾರ್ಮಿಕ ಇಲಾಖೆ.ಐಎಂಎ ಅಧ್ಯಕ್ಷರು.ಆರೋಗ್ಯ ಇಲಾಖೆಯ ತ್ರಿವೇಣಿ ಃಕಒ, ಜಿಲ್ಲಾ ಖಈಗಿ ಮೇಲ್ವಿಚಾರಕರುರಾಘವೇಂದ್ರ,ಹನುಮಂತ ಸೇರಿದಂತೆ ನಗರ ಆರೋಗ್ಯ ಇಲಾಖೆ. ತಾಲುಕಾ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಬ್ಬಂದಿಗಳು ಆಶಾ ಕಾರ್ಯಕರ್ತರು ಸಭೆಯಲ್ಲಿದ್ದರು.

# ಕಲ್ಮಲ ಗ್ರಾಮದಲ್ಲಿ ಏಡ್ಸ್ ಸೋಂಕು ತಡೆಗೆ ಸಮುದಾಯದ ಸಹಕಾರಕ್ಕಾಗಿ ಕಲಾ ತಂಡದ ಮೂಲಕ ಜಾಗೃತಿ



ಯುವಮಾರ್ಗ ಸುದ್ದಿ

**ರಾಯಚೂರು,ಡಿ.6–** ಆಕಸ್ಮಿಕವಾಗಿಯಾಗಲಿ ಅಥವಾ ಜೀವನದ ತಪ್ಪು ಹೆಜ್ಜೆಗಳಿಂದಾಗಲಿ ವ್ಯಕ್ತಿಯು ಹೆಚ್‌ಐವಿ ಸೋಂಕಿಗೆ ಒಳಗಾಗಿ ಜೀವನದ ಸುಂದರ ಕ್ಷಣಗಳನ್ನು ದೂರ ಮಾಡಿಕೊಳ್ಳಬಾರದು, ಅದರಲ್ಲೂ ಅಪರಿಚಿತರೊಂದಿಗೆ ಅಸುರಕ್ಷಿತ ಲೈಂಗಿಕ ಸಂಪರ್ಕವು ಸೋಂಕು ಹರಡಲು ಪ್ರಮುಖ ಪಾತ್ರ ವಹಿಸುತ್ತದೆ ಈ ದಿಶೆಯಲ್ಲಿ ನಾವೇಲ್ಲರೂ ಜಾಗೃತರಾಗೋಣ ವೆಂದು ರಾಯಚೂರು ಕರ್ನಾಟಕ ರಾಜ್ಯ ಏಡ್ಸ್ ಪ್ರಿವೇನ್‌ಷನ್ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಡ್ಯಾಪ್ಕೋ ಹಾಗೂ ಶ್ರೀ ಕೃಷ್ಣ ಪಾರಿಜಾತ ತಂಡ ಲೋಕಾಪೂರ ರವರ ಕಲಾಪ್ರದರ್ಶನದ ಮೂಲಕ, ಕಲ್ಮಲ ಗ್ರಾಮದ ಮಾರುತಿ ದೇವಸ್ಥಾನದ ಆವರಣದಲ್ಲಿ ಸಾರ್ವಜನಿಕರಿಗೆ ಜನಜಾಗೃತಿ ನೀಡಲಾಯಿತು.

ಈ ಸಂಧರ್ಭದಲ್ಲಿ ಗ್ರಾಮ ಪಂಚಾಯತ ಸದಸ್ಯ ಈಶ್ವರ ರಂಗಾ, ಹಿರಿಯ ಮುಖಂಡರಾದ ಯಲ್ಲಪ್ಪ ಓತಪ್ಯಾಟಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಬಾನುಕಾಂತ ರೆಡ್ಡಿ, ಮುಖಂಡರಾದ ಗಂಗಪ್ಪ, ಶ್ರೀನಿವಾಸ, ನರಸಪ್ಪ,ಬಸ್ಸಪ್ಪ ಬಾಗಲಿ, ಕುಮಾರಸ್ವಾಮಿ, ರಂಗನಾಥ, ಆಶಾ ಕಾರ್ಯಕರ್ತೆಯರು, ತಾಯಂದಿರು ಉಪಸ್ಥಿತರಿದ್ದರು.

# ಕೇಂದ್ರ ಸರ್ಕಾರ ಜೆಜೆಎಂ ಸೇರಿದಂತೆ ಇತರೆ ಯೋಜನೆಗಳಿಗೆ ತನ್ನ ಪಾಲಿನ ಅನುದಾನ ಬಿಡುಗಡೆ ಮಾಡುತ್ತಿಲ್ಲ: ಪ್ರಿಯಾಂಕ್ ಖರ್ಗೆ



**ಕಲಬುರಗಿ,ಡಿ.6–**ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಪಾಲುದಾರಿಕೆಯ ಯೋಜನೆಗಳಿಗೆ ಕೇಂದ್ರ ತನ್ನ ಪಾಲಿನ ಅನುದಾನ ಬಿಡುಗಡೆ ಮಾಡದಿರುವುದಕ್ಕೆ ಜಲ್ ಜೀವನ ಮಿಷನ್ ನಂತ ಪ್ರಮುಖ ಯೋಜನೆ ಜಾರಿಯಲ್ಲಿ ಕುಂಠಿತವಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಜಿಲ್ಲಾಧಿಕಾರಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡುತ್ತಿದ್ದರು.

ಜಲ್ ಜೀವನ್ ಮಿಷನ್ ಅಡಿಯಲ್ಲಿ ಕುಡಿಯುವ ನೀರು ಒದಗಿಸುವ ಯೋಜನೆಗೆ ಕಳೆದ ಸಾಲಿನಲ್ಲಿ ಬರಬೇಕಾಗಿದ್ದ ರೂ 2,500 ಕೋಟಿ ಅನುದಾನದಲ್ಲಿ ಕೇಂದ್ರ ಕೇವಲ ರೂ 517 ಕೋಟಿ ಮಾತ್ರ ಬಿಡುಗಡೆ ಮಾಡಿತ್ತು. ಆದರೆ, ರಾಜ್ಯದ ಜನರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ರಾಜ್ಯ ಸರ್ಕಾರ ಉಳಿದ ಹಣವನ್ನು ಭರಿಸಿತ್ತು. ಆದರೆ ಈ ಸಲವೂ ಕೂಡಾ ಅನುದಾನ ಬಿಡುಗಡೆ ಮಾಡದೇ ಇರುವುದರಿಂದ ಯೋಜನೆ ಜಾರಿಯಲ್ಲಿ ಕುಂಠಿತವಾಗುತ್ತಿದೆ. ರಾಜ್ಯಕ್ಕೆ ಈಗ ರೂ 13,000 ಕೋಟಿ ಅನುದಾನ ಬೇಕಿದೆ. ಕೇಂದ್ರಕ್ಕೆ ಕನ್ನಡಿಗರು ಕಟ್ಟುವ ತೆರಿಗೆ ಮಾತ್ರ ಬೇಕಿದೆ. ಆದರೆ, ಕನ್ನಡಗಿರಿಗೆ ವಾಪಸ್ ನೀಡುವುದು ಅದಕ್ಕೆ ಬೇಕಿಲ್ಲ ಎಂದರು.

**ಅನುದಾನ ಬಾಕಿ ಕುರಿತು ಕೇಂದ್ರ ಸುಳ್ಳು ಮಾಹಿತಿ**

ಕೇಂದ್ರ ಸರ್ಕಾರ ತನ್ನ ಪಾಲಿನ ಅನುದಾನ ಬಿಡುಗಡೆ ಮಾಡದೇ ಇರುವುದಕ್ಕೆ ಜೆಜೆಎಂ ಯೋಜನೆ ಜಾರಿ ಅಸಾಧ್ಯ ಎಂದು ಆಸ್ಸಾಂ ಹಾಗೂ ಸಿಕ್ಕಿಂ ರಾಜ್ಯಗಳು ಕೇಂದ್ರಕ್ಕೆ ಪತ್ರ ಬರೆದಿವೆ. ಆದರೆ, ರಾಜ್ಯ ಸರ್ಕಾರ ತನ್ನದೇ ಅನುದಾನ ಬಳಸಿಕೊಂಡು ಕೆಲಸ ಮುಂದುವರೆಸಿದೆ. ಆದರೂ ಪ್ರಧಾನಿ ನರೇಂದ್ರ ಮೋದಿ ರಾಜ್ಯ ಸರ್ಕಾರಕ್ಕೆ ನೀಡಬೇಕಾದ ಅನುದಾನದಲ್ಲಿ ಬಾಕಿ ಇಲ್ಲ ಎಂದು ಸಂಸತ್ತಿನಲ್ಲಿ ಹೇಳಿದ್ದಾರೆ ಎಂದು ಸಚಿವರು ಅಸಮಾಧಾನ ವ್ಯಕ್ತಪಡಿಸಿದರು.

**ಹಣಕಾಸು ಸಚಿವೆ ಕೊಡುಗೆ ಏನು ?**

15 ನೇ ಹಣಕಾಸು ಆಯೋಗದಲ್ಲಿ ನೀಡಬೇಕಾದ ಅನುದಾನ ಬಿಡುಗಡೆ ಮಾಡಿಲ್ಲ ಎಂದ ಪ್ರಿಯಾಂಕ್ ಖರ್ಗೆ ನರೇಜಾ ಯೋಜನೆಯಡಿಯಲ್ಲಿ ರಾಜ್ ಸ್ಥಾಪಿಸಲಾದ " ಕೂಸಿನ ಮನೆ " ಯೋಜನೆಯಡಿಯಲ್ಲಿ ಕೆಲಸ ಮಾಡುವ ಕೇರ್ ಟೇಕರ್ ಗಳಿಗೆ ಅನುದಾನ ಬಿಡುಗಡೆ ಮಾಡಿಲ್ಲ. ಕಲಬುರಗಿ ಹಾಗೂ ಬೀದರ್ ನಗರಗಳಿಗೆ ಕುಡಿಯುವ ನೀರು ಒದಗಿಸುವ ರೂ 6,000 ಕೋಟಿ ವೆಚ್ಚದ ರಾಜ್ಯ ಸರ್ಕಾರದ ಮಹತ್ತರ ಕುಡಿಯುವ ಯೋಜನೆ ಜಾರಿಗಾಗಿ ಕೂಡಾ ಕೇಂದ್ರ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಜಿಎಸ್ ಟಿ, ರಾಷ್ಟ್ರೀಯ ಹೆದ್ದಾರಿಗಳಿಗಾಗಿ ಬೇಕಾಗುವ ಅನುದಾನ ಬಿಡುಗಡೆಗಾಗಿ ಕೇಂದ್ರ ಅಸಹಕಾರ ತೋರಿಸುತ್ತಿದೆ. ರಾಜ್ಯದಿಂದ ಆಯ್ಕೆಯಾಗಿ ಹೋದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಸಂಸದರು ಈ ಬಗ್ಗೆ ಮಾತನಾಡಲಿ ಎಂದು ಆಗ್ರಹಿಸಿದರು.

**ರಾಜಕೀಯ ಪ್ರೇರಿತ ಕೇಸುಗಳು**

ನ್ಯಾಷನಲ್ ಹೆರಾಲ್ಡ್ ಹಾಗೂ ಯಂಗ್ ಇಂಡಿಯಾ ಪ್ರಕರಣಗಳು ರಾಜಕೀಯ ಪ್ರೇರಿತ ಎಂದ ಖರ್ಗೆ, " ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ" ( ಕಡಿಜತಜಟಣುಠಟಿ ಠಜಿ ಒಠಟಿಜಥಿ ಐಚಿಣಟಿ– ಜಜಡಿಟಿರ ಂಛಿಣ ) ಅಡಿಯಲ್ಲಿ ಪ್ರಕರಣ ದಾಖಲಾಗಿದ್ದರೂ ಕೂಡಾ ಹಣ ಎಲ್ಲಿಂದ ಬಂತು? ಎಲ್ಲಿಗೆ ಹೋಗಿದೆ? ಎನ್ನುವುದರ ಬಗ್ಗೆ ಯಾರಿಗೂ ಗೊತ್ತಿಲ್ಲ. ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಎಐಸಿಸಿ ಅಧ್ಯಕ್ಷರಾಗಿ ಮೂರು ವರ್ಷವಾಯಿತು, ಅವರಿಗೂ ನೋಟಿಸೂ ಕೊಟ್ಟಿದ್ದಾರೆ. ಹಾಗೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಅವರಿಗೂ ನೋಟಿಸು ಜಾರಿ ಮಾಡಿದ್ದಾರೆ. ಕೇಂದ್ರ ಸರ್ಕಾರದ ಆರ್ಥಿಕ ವ್ಯವಸ್ಥೆ ಯಾವಗೆಲ್ಲ ದುರ್ಬಲ ಆದಾಗ ಮೋದಿ ಸರ್ಕಾರ ಈತರ ನೋಟಿಸು ಜಾರಿ ಮಾಡುತ್ತದೆ. ರಾಹುಲ್ ಗಾಂಧಿ, ರಾಬರ್ಟ್ ವಾಡ್ರಾ ಮೇಲೂ ಕೇಸು ಹಾಕಿತ್ತು ಎಂದು ಆರೋಪಿಸಿದರು.

**ತನ್ನ ನಾಯಕರ ಭ್ರಷ್ಟಾಚಾರದ ಬಗ್ಗೆ ಬಿಜೆಪಿ ಮಾತನಾಡಲಿ**

ಬಿಜೆಪಿ ಪಕ್ಷ ತನ್ನ ನಾಯಕರ ಭ್ರಷ್ಟಾಚಾರಗಳ ಬಗ್ಗೆ ಚಕಾರ ಎತ್ತಲ್ಲ. ಅಜಿತ್ ಕುಮಾರ್ ಅವರ ಬಗ್ಗೆ ಅತೀಭ್ರಷ್ಟ ಎಂದು ಕರೆದಿದ್ದ ಬಿಜೆಪಿ ಈಗ ಅವರ ಅಳಿಯನ ಮೇಲೆ ರೂ 1,700 ಕೋಟಿ ಭ್ರಷ್ಟಾಚಾರದ ಆರೋಪ ಬಂದಿದೆ ಆ ಬಗ್ಗೆ ಬಿಜೆಪಿ ಮಾತನಾಡಲ್ಲ. ಸಿಎಂ ಹಿಮಂತ ಬಿಸ್ವಾ ಶರ್ಮಾ ಅವರನ್ನ ಪ್ರಪಂಚ ಕಡು ಭ್ರಷ್ಟ ಎಂದು ಆಗ ಬಿಜೆಪಿ ಕರೆದಿತ್ತು. ಈಗ ಅವರೇ ಬಿಜೆಪಿ ಸರ್ಕಾರದ ಸಿಎಂ ಎಂದು ಪ್ರಿಯಾಂಕ್ ಟೀಕಿಸಿದರು.

**ಗುರುದಕ್ಷಿಣೆ ಸ್ವೀಕರಿಸಿದಕ್ಕೆ ಲೆಕ್ಕ ಬೇಡವಾ?**

ಆರ್ ಎಸ್ ಎಸ್ ಆದಾಯದ ಬಗ್ಗೆ ಪ್ರಶ್ನೆ ಮಾಡಿದ ಪ್ರಿಯಾಂಕ್ ಖರ್ಗೆ, ಗುರದಕ್ಷಣೆ ಮಾತ್ರ ಸ್ವೀಕರಿಸಲಾಗುತ್ತಿದೆ ಎಂದು ಆರ್ ಎಸ್ ಎಸ್ ಪ್ರಮಯಖರು ಹೇಳುತ್ತಾರೆ. ಅವರ ಗುರು ಎಂದರೆ ಧ್ವಜ ಎಂದು ಹೇಳುತ್ತಾರೆ, ಧ್ವಜದ ಹೆಸರಲ್ಲಿ ಸ್ವೀಕರಿಸಿದ ಹಣಕ್ಕೂ ಲೆಕ್ಕ ಬೇಕಲ್ಲ ? ಎಂದರು.

**ಅಮೃತ್ ಕಾಲ್ ಕೇವಲ ಅಂಬಾನಿ, ಅದಾನಿಗೆ ಮಾತ್ರ**

ಡಾಲರ್ ಎದುರು ರೂಪಾಯಿ ಗಣನೀಯ ಕುಸಿತ ಕಂಡಿದೆ. ದೇಶದಲ್ಲಿ 2 ಲಕ್ಷ ಎಂ ಎಸ್ ಎಂ ಈ ಗಳು ಮುಚ್ಚಿವೆ. ಇದನ್ನು ನೋಡಿದರೆ ದೇಶದ ಆರ್ಥಿಕ ಸ್ಥಿತಿ ಚೆನ್ನಾಗಿದೆಯಾ ಎನಿಸುತ್ತದೆಯಾ? ' ಅಮೃತ್ ಕಾಲ್, ' ವಿಕಸಿತ್ ಭಾರತ್ ' ಯೋಜನೆಗಳೆಲ್ಲ ಅದಾನಿ ಹಾಗೂ ಅಂಬಾನಿ ಅವರ ಬೆಳವಣಿಗೆಗೆ ಬಿಡುವ ಮೋದಿ, ಜನರಿಗಾಗಿ ತಮ್ಮ ಎಲ್ಲ ಜವಾಬ್ದಾರಿಯನ್ನು ಮರೆತುಬಿಟ್ಟಿದ್ದಾರೆ. ಸ್ವಚ್ಛ ಭಾರತ್ ಹಾಗೂ ಮನ್ ಕೀ ಬಾತ್ ಮಾತ್ರ ಜನರಿಗೆ ಬಿಟ್ಟಿದ್ದಾರೆ ಎಂದು ಕುಟುಕಿದರು.

ಸಾಮಾಜಿಕ, ಆರ್ಥಿಕ ಸರ್ವೆ ಮಾಡಲಿ

ಕೇಂದ್ರ ಸರ್ಕಾರದ ಉದ್ದೇಶಿತ ಸಮಾಜಿಕ ಹಾಗೂ ಆರ್ಥಿಕ ಸರ್ವೆ ಯಾಕೆ ಮಾಡುತ್ತಿಲ್ಲ ? ಎಂದು ಪ್ರಶ್ನಿಸಿದ ಸಚಿವರು 2021ರಲ್ಲೇ ಆಗಬೇಕಿದ್ದ ಸರ್ವೆ 2025 ಆದರೂ ಮುಗಿಯುತ್ತಿಲ್ಲ. ನಮ್ಮ ಸರ್ಕಾರ ಯಾವುದಾದರೂ ಯೋಜನೆ ಮುಗಿಸಲು 1 ವರ್ಷ ಅವಧಿ ನಿಗದಿಪಡಿಸಿದರೆ. ಮೋದಿ ಅವರ ಎಲ್ಲಾ ಯೋಜನೆಗಳು 2047 ರ ಯೋಜನೆಗಳಾಗಿವೆ ಎಂದರು.

**ವಿಮಾನ ಹಾರಾಟ ರದ್ದು ಕೇಂದ್ರದ ಹೊಣೆಗಾರಿಕೆ**

ಪ್ರಸ್ತುತ ಇಂಡಿಗೋ ವಿಮಾನ ಹಾರಾಟ ರದ್ದಾದ ವಿಚಾರ ಪ್ರಸ್ತಾಪಿಸಿದ ಪ್ರಿಯಾಂಕ್ ಖರ್ಗೆ, ಈ ವಿಚಾರದಲ್ಲಿ ಕೇಂದ್ರದ ಹೊಣೆಗಾರಿಕೆ ಇಲ್ಲವೇ? ಹವಾಯಿ ಚಪ್ಪಲಿ ಹಾಕುವವರೂ ಕೂಡಾ ವಿಮಾನದಲ್ಲಿ ಓಡಾಡುವಂತೆ ಮಾಡುತ್ತೇನೆ ಎಂದು ಮೋದಿ ಹೇಳಿದ್ದರು. ಈಗ ವಿಮಾನ ನಿಲ್ದಾಣಗಳಲ್ಲಿ ಚಪ್ಪಲಿ ಹಾರಾಡುವಂತೆ ಆಗಿದೆ ಎಂದರು.

**ಕುಮಾರಸ್ವಾಮಿ ಸಿಎಂ ಇದ್ದಾಗ ಭಗವದ್ಗೀತೆ ಪಠ್ಯದಲ್ಲಿ ಸೇರಿಸಬೇಕಿತ್ತು**

ಕೇಂದ್ರ ಸಚಿವ ಎಚ್.ಡಿ. ಕುಮಾರ ಸ್ವಾಮಿ ಅವರು ಶಾಲಾ ಪಠ್ಯಗಳಲ್ಲಿ ಭಗವಗ್ದೀತೆ ಸೇರಿಸಬೇಕು ಎಂದು ಪತ್ರ ಬರೆದಿರುವ ವಿಚಾರಕ್ಕೆ ಸಂಬಂಧಿಸಿದಂತೆ ವರದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಪ್ರಿಯಾಂಕ್ ಖರ್ಗೆ, ಅವರು ಸಿಎಂ ಇದ್ದಾಗ ಮಾಡಬಹುದಿತ್ತಲ್ಲ ? ಆರ್ ಎಸ್ ಎಸ್ ಬಗ್ಗೆ ಅವರು ಒಂದು ದೊಡ್ಡದಾದ ಆರ್ಟಿಕಲ್ ನ್ನು ಪತ್ರಿಕೆಯೊಂದಕ್ಕೆ ಬರೆದಿದ್ದರು. ಅವರ ಆರ್ಟಿಕಲ್ ನಲ್ಲಿ ಪಸ್ತಾಪಿಸಿರುವ ಎಲ್ಲ ವಿಚಾರಗಳ ಬಗ್ಗೆ ನನಗೆ ಒಪ್ಪಿಗೆ ಇದೆ ಎಂದರು.

**ಸಂಪ್ರದಾಯ ಮುರಿದ ಮೋದಿ**

ರಷ್ಯಾ ಅಧ್ಯಕ್ಷ ಪುಟಿನ್ ಭಾರತ ಭೇಟಿಯಲ್ಲಿ ವಿರೋಧ ಪಕ್ಷದ ನಾಯಕರನ್ನು ಆಹ್ವಾನಿಸದೇ ಇರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಹಿಂದೆ ಇದ್ದ ಸಂಪ್ರದಾಯವನ್ನು ಮೋದಿ ಮುರಿದಿದ್ದಾರೆ. ಯಾಕೆಂದರೆ ಪುಟಿನ್ ಅವರೊಂದಿಗೆ ತೆಗೆಸಿಕೊಳ್ಳುವ ಫೊ?ಟೋ ಫ್ರೇಮ್ ನಲ್ಲಿ ಅವರೊಬ್ಬರೇ ಕಾಣಿಸಿಕೊಳ್ಳಬೇಕಲ್ಲ ಎಂದು ಕುಟಿಕಿದರು. ಆದರೂ, ಶಶಿ ತರೂರ್ ಗೆ ಆಹ್ವಾನವಿದೆಯಲ್ಲ ? ಎಂದು ಪತ್ರಕರ್ತರು ಕೇಳಿದಾಗ, ಅವರ ಹಾಗೂ ಅವರ ನಡುವೆ ಏನಿದೆಯೋ ನನಗೆ ಗೊತ್ತಿಲ್ಲ ಎಂದು ಸಚಿವರು ಮಾರುತ್ತರ ನೀಡಿದರು.

**ಆದಾಯ ತೆರಿಗೆ ಪಾವತಿಸಿ ವಾಚ್ ಕಟ್ಟಬಾರದಾ?**

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಮಾರ ಅವರು ಒಂದೇ ತರ ದುಬಾರಿ ಬೆಲೆಯ ವಾಚ್ ಧರಿಸಿರುವ ವಿಚಾರ ಮುನ್ನೆಲೆಗೆ ಬಂದ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ, ಯಾಕೆ ಒಂದೇ ತರ ವಾಚ್ ಧರಿಸಬಾರದಾ? ಆದಾಯ ತೆರಿಗೆ ಸರಿ ಇದ್ದರೆ ವಾಚ್ ಧರಿಸಲು ಏನು ಸಮಸ್ಯೆ ಇದೆ. ಮೋದಿ ಕೈಯಲ್ಲೇ ಎಲ್ಲ ತನಿಖೆಸಂಸ್ಥೆಗಳು ಇವೆಯಲ್ಲ ಅದಕ್ಕೂ ಒಂದು ನೋಟಿಸು ನೀಡಲಿ. ಮೋದಿ ಹತ್ತು ಲಕ್ಷದ ಸೂಟ್ ಧರಿಸಿದ್ದನ್ನ ಮಾಧ್ಯಮದವರು ಯಾಕೆ ಪ್ರಶ್ನಿಸುವುದಿಲ್ಲ ಎಂದರು.

**ಬಿಜೆಪಿ ನನ್ನ ಆಸ್ತಿ ಹುಡುಕಿಕೊಡಲಿ**

ಬಿಜೆಪಿಯುವರು ಸುಳ್ಳುನ್ನು ಹೇಳುವುದು. ಅದನ್ನೇ ಪ್ರತಿಪಾದಿಸುವುದು ಅವರ ಅಭ್ಯಾಸ ಎಂದು ವಾಗ್ದಾಳಿ ನಡೆಸಿದ ಸಚಿವರು, ಚುನಾವಣೆಗೆ ಮುನ್ನ ಪ್ರಿಯಾಂಕ್ ಖರ್ಗೆ ಸದಾಶಿವನಗರದಲ್ಲಿ ಬಂಗಲೆ ಹೊಂದಿದ್ದಾರೆ. ಕೊಡುಗೆ, ಚಿಕ್ಕ ಮಗಳೂರಿನಲ್ಲಿ ಆಸ್ತಿ ಹೊಂದಿದ್ದಾರೆ ಎಂದು ಹೇಳಿದ್ದರು. ಅದಕ್ಕೆ ನಾನು ನನ್ನ ಆಸ್ತಿಗಳನ್ನು ಹುಡುಕಿಕೊಡಿ ಎಂದಿದ್ದೆ. ಈಗಲೂ ಕೂಡಾ ಅವರು ನನ್ನ ಆಸ್ತಿಗಳನ್ನು ಹುಡುಕುತ್ತಲೇ ಇದ್ದಾರೆ ಎಂದು ವ್ಯಂಗ್ಯವಾಡಿದರು.

**ಗ್ರಾಪಂ ವ್ಯಾಪ್ತಿಯ ಆಸ್ತಿಗಳ ತೆರಿಗೆ ವಸೂಲಿ**

ಗ್ರಾಮಪಂಚಾಯತಿ ವ್ಯಾಪ್ತಿಯ ಆಸ್ತಿಗಳ ತೆರಿಗೆ ವಸೂಲಿ ಕಾರ್ಯ ನಡೆಯುತ್ತಿದೆ. ಕಳೆದ ಬಾರಿ ರೂ 1,272 ಕೋಟಿ ತೆರಿಗೆ ವಸೂಲಾಗಿದೆ. ಈ ಸಲ ರೂ 3,500 ಕೋಟಿ ದಾಟಬಹುದು. ರಾಜ್ಯದಲ್ಲಿ ಒಟ್ಟು 95 ಲಕ್ಷಕ್ಕೂ ಅಧಿಕ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲಾಗುತ್ತಿದೆ ಎಂದು ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದರು.

ವೇದಿಕೆಯ ಮೇಲೆ ಶಾಸಕರಾದ ಅಲ್ಲಮಪ್ರಭು ಪಾಟೀಲ್, ಕನೀಜ್ ಫಾತೀಮಾ, ಎಂ ಎಲ್ ಸಿ ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ, ಕುಡಾ ಚೇರ್ ಮನ್ ಮಜರ್ ಅಹಮದ್ ಖಾನ್, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಹರವಾಳ್, ಎನ್ ಇ ಕೆ ಆರ್ ಟಿ ಸಿ ಅಧ್ಯಕ್ಷ ಅರುಣ್ ಕುಮಾರ ಎಂ ವೈ ಪಾಟೀಲ್ ಸೇರಿದಂತೆ ಹಲವರಿದ್ದರು.

# ಶರಣ ಸಂಸ್ಕೃತಿಯಲ್ಲಿ ಸ್ತ್ರೀ ಸಂವೇದನೆ

ಶರಣ ಸಂಸ್ಕೃತಿಯಲ್ಲಿ ಸ್ತ್ರೀ ಸಂವೇದನೆ ಎಂಬ ವಿಷಯದ ಕುರಿತು ಮಾತನಾಡುವ ಮುನ್ನ ಸ್ತ್ರೀ ಸಂವೇದನೆ ಎಂಬ ಪದದ ಅರ್ಥವನ್ನು ನೋಡೋಣ. ಸ್ತ್ರೀಯರ ತಮ್ಮ ಬದುಕಿನಲ್ಲಿ ಎದುರಿಸುವ ಅನುಭವಗಳು, ಸವಾಲುಗಳು ಮತ್ತು ಆಶಯಗಳಿಗೆ ಸಂಬಂಧಿಸಿದ ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಅರಿವನ್ನು ಸಂವೇದನೆ ಎಂದು ಹೇಳಬಹುದು.ಸ್ತ್ರೀಪರ ಸಂವೇದನೆ ಎಂದ ಕೂಡಲೇ ಅದನ್ನು ಪುರುಷದ್ವೇಷ ಎಂದು ಅರ್ಥೈಸಿಕೊಳ್ಳುವ ಬದಲು ಮಹಿಳೆಯರ ದೃಷ್ಟಿಕೋನ, ಭಾವನೆಗಳು ಹಾಗೂ ಪ್ರತಿರೋಧಗಳನ್ನು ಕುರಿತ ಭಾವಗಳು ಎಂದು ತಿಳಿಯಬೇಕು.

ಜಾತಿ, ವರ್ಗ, ಲಿಂಗ ತಾರತಮ್ಯ, ಶೋಷಣೆ ಮತ್ತು ಸಾಂಪ್ರದಾಯಿಕ ಪಾತ್ರಗಳ ಮಿತಿಗಳನ್ನು ಪ್ರಶ್ನಿಸುವುದನ್ನು ಕೂಡ ಸ್ತ್ರೀ ಸಂವೇದನೆಯು ಒಳಗೊಂಡಿರುತ್ತದೆ.ತನ್ನ ನಿಲುಕಿನಲ್ಲಿ ಬರುವ ಸಾಮಾಜಿಕ ಅರಿವು, ವ್ಯಕ್ತಪಡಿಸುವಿಕೆ, ಸಾಮಾಜಿಕ ಗೌರವ ಮತ್ತು ಸಮಾನತೆ, ಸಾಮಾಜಿಕ ಸ್ವಾವಲಂಬನೆ ಮತ್ತು ಸಬಲೀಕರಣ ಇವುಗಳ ಕುರಿತು ಮಹಿಳೆ ಹೊಂದಿರುವ ತನ್ನದೇ ಆದ ವೈಯುಕ್ತಿಕ ಅಭಿಪ್ರಾಯವೂ ಆಯಾ ಕಾಲದ ಸಾಮಾಜಿಕ ವಾಸ್ತವಗಳಿಗೆ ಮುಖಾಮುಖಿಯಾಗುತ್ತದೆ ಎಂಬುದು ಕುತೂಹಲದ ಸಂಗತಿ ಆದರೂ ಕೂಡ ಆಯಾ ಕಾಲ ಘಟ್ಟದ ಒತ್ತಡಗಳಿಗೆ ಪ್ರತಿಸ್ಪಂದಿಸುವ, ಒಪ್ಪಿಕೊಳ್ಳುವ ಅಪ್ಪಿಕೊಳ್ಳುವ ಇಲ್ಲವೇ ವಿರೋಧಿಸುವ, ಕೆಲ ನಿಯಮಗಳನ್ನು ಮುರಿಯುವ ಮತ್ತೆ ಕೆಲ ನಿಯಮಗಳನ್ನು ಮುರಿದು ಕಟ್ಟುವ ಅಂತಿಮವಾಗಿ ಮೌಲ್ಯಗಳನ್ನು ಪ್ರತಿಪಾದಿಸುವ ಸಂವೇದನೆಗಳನ್ನು ಸ್ತ್ರೀ ಸಂವೇದನೆ ಎಂದು ನಾವು ಕರೆಯಬಹುದು.

ಸಮಾಜದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳ ಬಗ್ಗೆ ಜಾಗೃತಿಯನ್ನು ಮೂಡಿಸುವುದು ಸಾಮಾಜಿಕ ಅರಿವಿನ ಸಂವೇದನೆಯಾದರೆ ಇದರಲ್ಲಿ ಮಹಿಳೆಯರು ತಮ್ಮ ಮನೆಯಲ್ಲಿ ಅನುಭವಿಸುವ ಸವಾಲುಗಳು ದೈಹಿಕ ಶ್ರಮ,ಕೌಟುಂಬಿಕ ಸಂಬಂಧಗಳು ಹಾಗೂ ಅವುಗಳಲ್ಲಿ ಮಾಡಿಕೊಳ್ಳಬೇಕಾದ ಹೊಂದಾಣಿಕೆಗಳನ್ನು ನಾವು ನೋಡಬಹುದು.ತಮ್ಮ ಭಾವನೆಗಳನ್ನು ಯೋಚನೆಗಳನ್ನು ಯಾವುದೇ ನಿರ್ಬಂಧವಿಲ್ಲದೆ ತಮ್ಮದೇ ಆದ ಶೈಲಿಯಲ್ಲಿ ವ್ಯಕ್ತಪಡಿಸಲು ಇರುವ ಅವಕಾಶಗಳು ಮಹಿಳೆಗೆ ಸಾಕಷ್ಟು ಇದ್ದು ಆಕೆ ಸಾಹಿತ್ಯ ಕಲೆ ರಾಜಕೀಯ ಮತ್ತು ಇತರ ಕ್ಷೇತ್ರಗಳಲ್ಲಿ ಭಾಗವಹಿಸುವ ಮೂಲಕ ಈ ವ್ಯಕ್ತಪಡಿಸುವಿಕೆಯನ್ನು ಕಾಣಬಹುದು.ಲಿಂಗ ಸಮಾನತೆ ಹಾಗೂ ಪುರುಷ ಸಮಾನ ಹಕ್ಕುಗಳನ್ನು ಮಹಿಳೆಯರು ಬಯಸುವುದು ಸ್ತ್ರೀ ಸಂವೇದನೆಯ ಮೂಲ ಉದ್ದೇಶವಾಗಿದೆ. ಇನ್ನು ಮುಖ್ಯವಾಗಿ ಶರಣ ಸಂಸ್ಕೃತಿಯಲ್ಲಿ ಸ್ತ್ರೀ ಸಂವೇದನೆಯನ್ನು ಹೇಳುವುದಾದರೆ ನಾವು ಅದರ ಹಿಂದಿನ ಯುಗಗಳ ಕುರಿತ ಹಿನ್ನೋಟವನ್ನು ಅರಿಯಲೇ ಬೇಕು.

ಬಸವಾದಿ ಶರಣರ ಶರಣ ಸಂಸ್ಕೃತಿಯ ಕಾಲ ಘಟಕ ಮುನ್ನ ಆದಿಯುಗದಲ್ಲಿ ಮಹಿಳೆಯ ಸರ್ವತಂತ್ರ ಸ್ವತಂತ್ರಳಾಗಿದ್ದಳು. ವೇದ, ಆಗಮ, ಉಪನಿಷತ್ತು ಪುರಾಣ ಹೀಗೆ ಎಲ್ಲ 64 ವಿದ್ಯೆಗಳನ್ನು ಕಲಿಯುವ ಅವಕಾಶ ಆಕೆಗಿತ್ತು. ಖುದ್ದು ಆಕೆಯ ಪಾಲಕರಿಗೂ ಕೂಡ ಆಕೆಯನ್ನು ನಿಯಂತ್ರಿಸುತ್ತಿರಲಿಲ್ಲ. ತನ್ನ ಬದುಕಿನ ಯಾವುದೇ ನಿರ್ಣಯಗಳಿಗೆ ಆಕೆ ಬಾಧ್ಯಳಾಗಿದ್ದಳು. ಇದಕ್ಕೆ ಸಾಕ್ಷಿಯಾಗಿ ನಾವು ಅಂದಿನ ಕಾಲದ ಹೆಣ್ಣು ಮಕ್ಕಳು ಶಾಸ್ತ್ರಾರ್ಥಗಳಲ್ಲಿ, ನಿರ್ಣಾಯಕ ಪಾತ್ರ ವಹಿಸಿದ

ಲೋಪ ಮುದ್ರಾ, ಅಪಾಲ, ಗಾರ್ಗಿ, ಮೈತ್ರೇಯಿ, ವಿಶ್ವವರರಂತಹ ರಿಷಿಕುಮಾರಿಯರನ್ನು ನೋಡಬಹುದು. ಭಗವಾನ್ ಶಂಕರ ಮತ್ತು ಮಂಡನ ಮಿಶ್ರರ ನಡುವೆ ನಡೆದ ಶಾಸ್ತ್ರಾರ್ಥದಲ್ಲಿ ಮಂಡನ ಮಿಶ್ರ ಪತ್ನಿ ಉಭಯ ಭಾರತಿ ದೇವಿ ನಿರ್ಣಾಯಕಿಯಾಗಿ ಕಾರ್ಯನಿರ್ವಹಿಸಿರು ವುದನ್ನು ಕೂಡ ನಾವು ಕೇಳಿದ್ದೇವೆ.

ಈ ಕಾಲಘಟ್ಟದಲ್ಲಿ ಕೆಲ ಮಹಿಳೆಯರು ತಮಗೆ ಇದ್ದ ಸ್ವಾತಂತ್ರ್ಯವನ್ನು ಬಹುಮಟ್ಟಿಗೆ ದುರುಪಯೋಗ ಪಡಿಸಿಕೊಂಡರು ಎಂಬ ಕಾರಣಕ್ಕಾಗಿ ಮಧ್ಯಯುಗದಲ್ಲಿ ಇವರ ಮೇಲೆ ಕೆಲ ನಿರ್ಬಂಧಗಳನ್ನು ಹೇರಲಾಯಿತು. ಅದೇ ಸಮಯದಲ್ಲಿ ಭಾರತ ದೇಶಕ್ಕೆ ವಿದೇಶಿ ಆಕ್ರಮಣಕಾರರು ದಂಡೆತ್ತಿ ಬಂದ ಕಾರಣ ಈ ನಿರ್ಬಂಧಗಳು ಹೆಣ್ಣು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಸರಿ ಎಂಬ ಭಾವ ಜನರಲ್ಲಿ ತಲೆದೋರಿತು.. ಪರಿಣಾಮವಾಗಿ ಹೆಣ್ಣು ಮಕ್ಕಳು ಸಾಮಾಜಿಕ ಸಂಕೋಲೆಗಳಲ್ಲಿ ಬಂದಿಯಾಗಬೇಕಾಯಿತು. ಕುಟುಂಬದ ಧಾರ್ಮಿಕ ವಿಧಿ ವಿಧಾನಗಳಲ್ಲಿ ಆಕೆ ತನ್ನ ಪತಿಯ ಜೊತೆಗೆ ಪಾಲ್ಗೊಳ್ಳಬಹುದಾದರೂ ಶಿಕ್ಷಣ, ಅಧ್ಯಯನ, ಬದುಕು, ಸಂಗಾತಿಯನ್ನು ಆಯ್ದುಕೊಳ್ಳುವ ಆಕೆಯ ಹಕ್ಕುಗಳಿಗೆ ಚ್ಯುತಿ ಉಂಟಾಯಿತು. ಮುಖ್ಯವಾಗಿ ಪುರುಷನ ಆಧೀನದಲ್ಲಿ ಹೆಣ್ಣು ದಾಸ್ಯದ ಬದುಕನ್ನು ಅಪ್ಪಿಕೊಳ್ಳಬೇಕಾಯಿತು. ತನ್ನ ಎದುರಿಗಿರುವ ವ್ಯಕ್ತಿಯನ್ನು ಯಜಮಾನ ಎಂದು ಒಪ್ಪಿಕೊಳ್ಳಬೇಕಾದರೆ ಆಕೆ ಆತನ ಸೇವಕಿ ಎಂಬುದು ಅನಿವಾರ್ಯದ ಒಪ್ಪಿಗೆಯಾಯಿತು. ಪುರುಷಸ್ವಾಮ್ಯದ ಮುಂದೆ ಸ್ತ್ರೀತ್ವದ ಪರಿಭಾಷೆ ಮಂಡಿಯೂರಿ ಅಡಿಯಾಳಾಯಿತು ಎಂದರೆ ತಪ್ಪಿಲ್ಲ.

ನಂತರ ಬಂದದ್ದೇ ಶರಣ ಸಂಸ್ಕೃತಿಯ ಸುವರ್ಣ ಯುಗ ಶರಣರ ಕಾಲ 12ನೇ ಶತಮಾನ. ಈ ಸಮಯದಲ್ಲಿ ಸಾಮಾಜಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಬಹುದೊಡ್ಡ ಬದಲಾವಣೆಗಳನ್ನು ವಿಶ್ವಗುರು, ಜಗಜ್ಯೋತಿ, ಎಂದೆಲ್ಲಾ ಹೆಸರಾದ ಕ್ರಾಂತಿಯೋಗಿ ಅಣ್ಣ ಬಸವಣ್ಣನವರ ನೇತೃತ್ವದಲ್ಲಿ ಶರಣ ಸಂಕುಲವು ಅನುಭವ ಮಂಟಪದಲ್ಲಿ

ಯಾವುದೇ ರೀತಿಯ ಜಾತಿ, ಲಿಂಗ, ಮತಗಳ ಭೇದವಿಲ್ಲದೆ 'ಮಾನವ ಜಾತಿ ತಾನೊಂದೇ ವಲಂ' ಎಂಬ ವಿಶ್ವ ಬಂಧುತ್ವದ, ವಿಶ್ವ ಭ್ರಾತೃತ್ವದ ಭಾವದ ಅಡಿಯಲ್ಲಿ ಕಾಯಕ, ದಾಸೋಹ, ಲಿಂಗ ನಿಷ್ಠೆಗಳನ್ನು ಬದುಕಿನ ಮೂಲ ಧ್ಯೇಯಗಳನ್ನಾಗಿ ಬದುಕಿದರು.

ಈ ಸಮಯದಲ್ಲಿ ಅದುವರೆಗೂ ಪುರುಷದಾಸ್ಯದ ಸಂಕೋಲೆಯಲ್ಲಿ ತಮ್ಮೆಲ್ಲ ಮನದ ಭಾವನೆಗಳನ್ನು ಬರಡಾಗಿಸಿಕೊಂಡ ಮಹಿಳೆಯರು ಸ್ವಾತಂತ್ರ್ಯದ ತಿಳಿ ಗಾಳಿಯನ್ನು ಸವಿದರು. ಕಲ್ಲರಳಿ ಹೂವಾದ ಸುಣ್ಣದ ಕಲ್ಲಿನಂತೆ ತಮ್ಮೆಲ್ಲ ಮನದ ಭಾವಗಳನ್ನು ಬಿಚ್ಚಿ ವಚನಗಳ ಮೂಲಕ ಪ್ರಸ್ತುತ ಪಡಿಸಿದರು. ವೀರ ವಿರಾಗಿಣಿಯಾದ ಅಕ್ಕಮಹಾದೇವಿ ತಾಯಿ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಆಯ್ದಕ್ಕಿ ಲಕ್ಕಮ್ಮ ಕದಿರ ರೆಮ್ಮವ್ವೆ ಕನ್ನಡಿ ಕಾಯಕದ ರೆಮ್ಮವ್ವೆ, ಕೇತಲದೇವಿ, ಗೊಗ್ಗವ್ವೆ ಬಂತಾದೇವಿ ದುಗ್ಗಳೆ ಮುಂತಾದ 33ಕ್ಕೂ ಹೆಚ್ಚು ವಚನಕಾರ್ತಿಯರು ಅತ್ಯಂತ ನಿರ್ಭಿಡೆಯಿಂದ ಆದರೆ ಅಷ್ಟೇ ಸರಳ ಹಾಗೂ ಮುಕ್ತ ಮನದಿಂದ ವಚನಗಳನ್ನು ರಚಿಸಿದರು. ಅವರ ವಚನಗಳಲ್ಲಿ ಹೆಚ್ಚು ಧೈರ್ಯ ಚಲ ನಿಷ್ಠುರತೆ ಆಧ್ಯಾತ್ಮ ಅಭಿಮಾನ ವಿಡಂಬನೆ ಹಾಗೂ ಕಟು ಟೀಕೆಗಳು ಮುಕ್ತವಾಗಿ ಮೂಡಿಬಂದಿವೆ.

ಶರಣ ಸಂಸ್ಕೃತಿಯ ಹೆಣ್ಣು ಮಕ್ಕಳು ಸ್ತ್ರೀ ಸಹಜ ಮಾತೃತ್ವ, ಮಮತೆ, ದಯಾಪರತೆಯ ಜೊತೆ ಜೊತೆಗೆ ನೇರ ನಿಷ್ಠುರವಾದ ನುಡಿಗಳಿಗೂ ಹೆಸರಾಗಿದ್ದರು.

ಅಮೆರಿಕಾದ ಖ್ಯಾತ ಸಮಾಜಶಾಸ್ತ್ರಜ್ಞೆ ಶೋ ವಾಲ್ತರ್ ಹೇಳುವ ಪ್ರಕಾರ 19ನೇ ಶತಮಾನದಲ್ಲಿ ಇಡೀ ಜಗತ್ತಿನ ಮಹಿಳಾ ಸಂಕುಲದಲ್ಲಿ ಫೆಮಿನೈನ್, ಫೆಮಿನಿಸ್ಟ್ ಹಾಗೂ ಫೆಮಿನಾ ಎಂಬ ಮೂರು ಬಗೆಯ ಸ್ತ್ರೀಯರ ಗುಂಪುಗಳನ್ನು ಕಾಣಬಹುದಾಗಿತ್ತು.

1840 ರಿಂದ 1880ರ ಕಾಲಘಟ್ಟದಲ್ಲಿ ಫೆಮಿನೈನ್ ಎಂದು ಕರೆಯಲ್ಪಡುವ ಸ್ತ್ರೀಯರು ಪುರುಷರನ್ನು ಅನುಕರಿಸುತ್ತಿದ್ದರು. ಪುರುಷರ ನಾಮಧೇಯಗಳನ್ನು ಇಟ್ಟುಕೊಂಡು ಬರೆಯುವ, ಚಿತ್ರಗಳನ್ನು ರಚಿಸುವ ಪುರುಷರ ವಸ್ತ್ರಗಳನ್ನು ಧರಿಸುವ ಮೂಲಕ ಅವರನ್ನು ಅನುಕರಿಸುವ ರೀತಿಯಲ್ಲಿ ಬದುಕುತ್ತಿದ್ದರು.

1880 ರಿಂದ 1920ರ ಕಾಲ ಘಟ್ಟದಲ್ಲಿ ಹೆಣ್ಣು ಮಕ್ಕಳು ಸಾಮಾನ್ಯವಾಗಿ ಪುರುಷರದ್ದು ಎಂದು ಕರೆಯಲ್ಪಡುವ ಎಲ್ಲ ರೀತಿಯ ಪುರುಷ ಮಾನದಂಡಗಳನ್ನು ತಿರಸ್ಕರಿಸಿ ತಮ್ಮದೇ ಆದ ಅಸ್ಮಿತೆಯನ್ನು ತೋರ್ಪಡಿಸುವ ರೀತಿಯಲ್ಲಿ ಬದುಕಲು ಆರಂಭಿಸಿದರು. ಇವರನ್ನು ಸಮಾಜ ಫೆಮಿನಿಸ್ಟ್ ಎಂದು ಕರೆಯಿತು.

ಮುಂದೆ 1920 ರಿಂದ ಮುಂದೆ 1960 ರವರೆಗೆ ಹೊಸ ರೀತಿಯ ಫೆಮಿನ ಎಂಬ ಸ್ತ್ರೀ ಸಮುದಾಯ ಹುಟ್ಟಿಕೊಂಡಿತು. ಸ್ತ್ರೀತ್ವದ ಮಹತ್ವಕ್ಕೆ ಹೊಸ ಭಾಷೆಯನ್ನು ಬರೆದ ಈ ಸಮುದಾಯವು ಹೆಣ್ಣು ಮಕ್ಕಳು ಪುರುಷರ ಮೇಲೆ ಹೊಂದಿದ್ದ ಎಲ್ಲ ರೀತಿಯ ಪರಾವಲಂಬನವನ್ನು ಮೀರಿ ಬೆಳೆಯುವ ನಿಟ್ಟಿನಲ್ಲಿ ತಮ್ಮದೇ ಆದ ರೀತಿಯ ಬದುಕನ್ನು ಕಂಡುಕೊಂಡರು. ಇವರು ಪುರುಷ ದ್ವೇಷಿಗಳಾಗದೆ, ಆದರೆ ಅದೇ ಸಮಯದಲ್ಲಿ ಪುರುಷರೊಂದಿಗೆ ಹೊಂದಾಣಿಕೆಯ ಬದುಕನ್ನು ನಡೆಸುತ್ತಾ ತಮ್ಮ ವೈಯುಕ್ತಿಕ ನಿಲುವುಗಳಿಗೆ ಬದ್ಧರಾಗಿ ನಿಂತರು.

19ನೇ ಶತಮಾನದಲ್ಲಿ ಸ್ತ್ರೀ ಸಮುದಾಯದಲ್ಲಿ ಆದ ಈ ಬದಲಾವಣೆಯನ್ನು ಸುಮಾರು ಎಂಟು ಶತಮಾನಗಳ ಹಿಂದೆಯೇ ನಾವು ಅಣ್ಣ ಬಸವಣ್ಣನವರ ಶರಣ ಸಂಸ್ಕೃತಿಯ ಕಾಲಘಟ್ಟದಲ್ಲಿ ನೋಡಬಹುದಾಗಿತ್ತು ಎಂದು ಓರ್ವ ಪಾಶ್ಚಾತ್ಯ ಸಮಾಜ ಶಾಸ್ತ್ರಜ್ಞ ಶೋ ವಾಲ್ತರ್ ಅಭಿಪ್ರಾಯ ಪಡುತ್ತಾಳೆ ಎಂದರೆ ಶರಣ ಸಂಸ್ಕೃತಿಯ ಕಾಲದ ಸ್ತ್ರೀಶಕ್ತಿಯ ಉಚ್ಛ್ರಾಯ ಸ್ಥಿತಿಯನ್ನು ನಾವು ಅರಿತುಕೊಳ್ಳಬಹುದು ಅಲ್ಲವೇ.

**ಮೊಲೆ ಮುಡಿ ಬಂದರೆ ಹೆಣ್ಣೆಂಬರು**

**ಗಡ್ಡ ಮೀಸೆ ಬಂದರೆ ಗಂಡೆಂಬರು**

**ನಡುವೆ ಸುಳಿವ ಆತ್ಮ**

**ಹೆಣ್ಣು ಅಲ್ಲ ಗಂಡೂ ಅಲ್ಲ**

**ಕಾಣಾ ರಾಮನಾಥ**

ಎಂಬ ಜೇಡರ ದಾಸಿಮಯ್ಯನವರ ವಚನವು ದೇಹದ ಲಕ್ಷಣಗಳ ಮೇಲೆ ಆಧಾರಿತ ಲಿಂಗ ತಾರತಮ್ಯವನ್ನು ಪ್ರಶ್ನಿಸುತ್ತದೆ. ಶರಣರು ಪುರುಷರಷ್ಟೇ ಮಹಿಳೆಯರು ಸಬಲರು ಎಂದು ಸ್ತ್ರೀ ಪುರುಷ ಸಮಾನತೆಯನ್ನು ಸಾರಿದರು.

ಶರಣ ಸಂಸ್ಕೃತಿಯಲ್ಲಿ ದಾಂಪತ್ಯ ಎಂಬುದು ಸಹಬಾಳ್ವೆಯ ಕುರುಹಾಗಿದ್ದು ದಂಪತಿಗಳು ಸಮಾನ ಸ್ಥಾಯಿ ಭಾವವನ್ನು ಹೊಂದಿದ್ದರು ಎಂಬುದಕ್ಕೆ ತನ್ನ ಪತಿ ಶರಣ ಆಯ್ದಕ್ಕಿ ಮಾರಯ್ಯನವರು ತಂದ ಹೆಚ್ಚಿನ ಅಕ್ಕಿಯನ್ನು ಕಂಡು

**ಆಸೆಯೆಂಬುದು ಅರಸಂಗಲ್ಲದೇ ಶಿವ ಭಕ್ತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ?**

**ಇದನ್ನು ಈಶ್ವರನು ಒಪ್ಪ**

ಎಂದು ಪತಿಗೆ ತಿಳಿ ಹೇಳಿ ದಿಟ್ಟತನವನ್ನು ಮೆರೆದ ಆಯ್ದಕ್ಕಿ ಲಕ್ಕಮ್ಮ ಆ ಅಕ್ಕಿಯನ್ನು ಮರಳಿಸಲು ಪತಿಗೆ ಹೇಳುತ್ತಾಳೆ. ಆಗ ತುಸು ಹಿಂಜರಿದ ತನ್ನ ಪತಿಗೆ 'ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೇ' ಎಂದು ಹೇಳುವ ದಾಷ್ಟಿಕತೆಯನ್ನು ತೋರುತ್ತಾಳೆ. ಇದು ಶರಣ ಸಂಸ್ಕೃತಿಯಲ್ಲಿರುವ ದಾಂಪತ್ಯದಲ್ಲಿ ಪತಿ–ಪತ್ನಿಯರ ಸಮಾನತೆಯ ಲಕ್ಷಣವಾಗಿತ್ತು.

**ಇನ್ನು ನೂಲುವ ಕಾಯಕದ ಕದಿರ ರೆಮ್ಮವ್ವೆ**

**ನಾ ತಿರುಗುವ ರಾಟೆಯ ಕುಲ ಜಾತಿ ಕೇಳಿರಣ್ಣ**

**ಅಡಿಯ ಹಲಗೆ ಬ್ರಹ್ಮ ತೋರಣ ವಿಷ್ಣು**

**ನಿಂದ ಬೊಂಬೆ ಮಹಾರುದ್ರ**

**ರುದ್ರನ ಬೆಂಬಳಿಯವೆರಡು ಸೂತ್ರ ಕರ್ಣ**

**ಅರಿವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿಸುತ್ತಿತ್ತು ನೂಲು ಕದಿರು ತುಂಬಿತ್ತು ರಾಟೆಯ ತಿರುವಲಾರೆ ನನ್ನ ಗಂಡ ಕೊಟ್ಟಿಹ ಇನ್ನೇವೇ**

**ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರ**

ಎಂದು ತನ್ನ ಕಾಯಕದಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರನ್ನು ಸಮನ್ವಯಗೊಳಿಸಿ ಆಧ್ಯಾತ್ಮ ಬೆರೆಸಿದ ಬೆಡಗಿನ ವಚನಗಳನ್ನು ರಚಿಸಿದ್ದು ಕುಲ ಜಾತಿಯ ಕುರಿತು ಪ್ರಶ್ನಿಸುವವರ ಮುಖದ ಮೇಲಿನ ನೀರನ್ನು ಇಳಿಸಿದ್ದಾಳೆ.

ಬಸವಕಲ್ಯಾಣವನ್ನು ತೊರೆದು ಕಪ್ಪಡಿ ಸಂಗಮದಲ್ಲಿ ನೆಲೆಸಿದ್ದ ಬಸವಣ್ಣನವರ ಆಶಯದಂತೆ ಅವರೊಂದಿಗೆ ಸಂಗಮಕ್ಕೆ ಬಂದು ನೆಲೆಸಲು ನೀಲಾಂಬಿಕೆ ತಾಯಿಯನ್ನು ಹಡಪದ ಅಪ್ಪಣ್ಣನವರು ಕೇಳಿಕೊಂಡಾಗ ತಾಯಿ ನೀಲಾಂಬಿಕೆ

**ನೋಡು ನೋಡು ನೋಡು ನೋಡು ಲಿಂಗವೇ**

**ನೋಡು ಬಸವಯ್ಯನವರು ಮಾಡಿದಾಟುವ**

**ಅಲ್ಲಿಗೆ ನಮ್ಮನ್ನು ಬರಲು ಹೇಳಿದರಂತೆ**

**ಅಲ್ಲಿರ್ಪ ಸಂಗಯ್ಯ ಇಲ್ಲಿಲ್ಲವೇ**

**ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವೇಕೆ ?**

**ಬಲ್ಲಿದ ಶರಣರಿಗೆ ಇದು ತರವೇ**

ಎಂದು ತಮ್ಮ ಎದೆಯ ಮೇಲಿನ ಲಿಂಗವನ್ನು ತೋರಿ ಹೇಳುವ ದಾಷ್ಟಿಕತೆ ಅಂದಿನ ಸ್ತ್ರೀಯರಿಗೆ ಇತ್ತು ಎಂಬುದಕ್ಕೆ ಇದಕ್ಕಿಂತ ಏನು ಹೇಳಬೇಕು.

ಅಂದಿನ ಕಾಲದ ಶಿವಶರಣೆಯರು ತಮ್ಮ ಕೊರಳಲ್ಲಿರುವ ಲಿಂಗವನ್ನು ಶರಣಪತಿ ಎಂದು ಒಪ್ಪಿಕೊಂಡವರು. ಇಹದ ಗಂಡರನ್ನು ಒಯ್ದು ಒಲೆಯಲಿ ಇಕ್ಕು ಎಂದು ಹೇಳಿದ್ದು ವೀರ ವಿರಾಗಿಣಿ ಅಕ್ಕಮಹಾದೇವಿ ತಾಯಿ.

ಅಂದಿನ ಸಾಮಾಜಿಕ ಕಟ್ಟಳೆಗಳನ್ನು ಮೀರಿ ತನ್ನ ಬದುಕಿನ ಧ್ಯೇಯ ಚನ್ನ ಮಲ್ಲಿಕಾರ್ಜುನನನ್ನು ಒಂದಾಗುವ ಆಶ್ರಯವನ್ನು ಪೂರೈಸಿಕೊಂಡ, ಇಡೀ ಜಗತ್ತಿಗೆ ಅಕ್ಕನಾಗಿ ಸ್ತ್ರೀ ಕುಲದ ಉದ್ಧಾರವನ್ನು ಮಾಡಿದ ಹೆಣ್ಣು ಮಗಳು ಅಕ್ಕಮಹಾದೇವಿ ತಾಯಿ. ಆಧ್ಯಾತ್ಮದ ಔನ್ನತ್ಯ ಶಿಖರವನ್ನೇರಿದ ಕದಳಿಯ ಕರ್ಪೂರ ವೈರಾಗ್ಯನಿಧಿ ಅಕ್ಕ

ಶರಣ ಸಂಸ್ಕೃತಿಯ ಸ್ತ್ರೀಪರ ಸಂವೇದನೆಗಳ ಅದ್ಭುತ ವಚನಗಳ ಕರ್ತೃ.ಇನ್ನು ಈ ಸಾಲಿನಲ್ಲಿ ಶರಣ ಸಂಸ್ಕೃತಿಯ ಗಂಗಮ್ಮ ಆವ ಕಾಯಕ ಮಾಡಿದರು ಒಂದೇ ಕಾಯಕ ಎಂದು ಹೇಳಿದರೆ,

ಬತ್ತವನ್ನು ಕುಟ್ಟುವ ಕಾಯಕದ ಕೊಟ್ಟಣದ ಸೋಮವ್ವ

ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿ ಇಲ್ಲ ವ್ರತ ಹೀನನ ಬೆರೆಯ ನರಕವಲ್ಲದೆ ಮುಕ್ತಿ ಇಲ್ಲ ಎಂದು ಕಾಯಕದ ದೃಷ್ಟಾಂತವನ್ನು ಹೇಳಿದ್ದಾರೆ.

**ಓರ್ವ ಪ್ರಾಮಾಣಿಕ ಸತ್ಯಸಾಧಕಿಯಾಗಿದ್ದ ಶರಣೆ ಸತ್ಯಕ್ಕ**

**ಅರ್ಚನೆ ಪೂಜೆ ನೇಮವಲ್ಲ ಮಂತ್ರ ತಂತ್ರ ನಿಯಮವಲ್ಲ**

**ಧೂಪ ದೀಪ ಆರತಿ ನೇಮವಲ್ಲ ಪರಸ್ತ್ರೀಪರ ದೈವಂಗಳಿಗೆರೆಗಲೇಕೆದಿಪ್ಪುದೆ ನೇಮ**

**ಶಂಬುಜಕ್ಕೇಶ್ವರನಲ್ಲಿ ಇವನು ಕಾಣೆ**

**ರನ್ನ ಇವೆ ನಿತ್ಯ ನಿಯಮ**

ಎಂದು ಡಾಂಭಿಕ ಭಕ್ತಿಯನ್ನು ತೋರುವ ಭಕ್ತರಿಗೆ ನೇರವಾಗಿ ಉತ್ತರಿಸಿದ್ದಾಳೆ.

ಹೀಗೆ ಸಮಾನತೆ, ಸ್ವಾತಂತ್ರ್ಯ,ಗೌರವ, ನಂಬಿಕೆ, ವಿಶ್ವಾಸಗಳ ಹಿನ್ನೆಲೆಯಲ್ಲಿ ಶರಣ ಸಂಸ್ಕೃತಿಯಲ್ಲಿ ಸ್ತ್ರೀ ಸಂವೇದನೆಗೆ ಹೆಚ್ಚಿನ ಮಹತ್ವವಿದೆ. ಪ್ರತಿಯೊಬ್ಬ ವಚನಕಾರ್ತಿಯು ತನ್ನ ಸಂವೇದನೆಗಳನ್ನು ಅತ್ಯಂತ ಸಮರ್ಥವಾಗಿ ವಚನಗಳ ಮೂಲಕ ಹಂಚಿಕೊಂಡಿದ್ದು ಅವರ ದಿಟ್ಟ, ಸ್ಪಷ್ಟ ವೈಚಾರಿಕ ನಿಲುವನ್ನು ತೋರ್ಪಡಿಸುತ್ತದೆ.

**–ವೀಣಾ ಹೇಮಂತ ಗೌಡ ಪಾಟೀಲ್,**

**ಮುಂಡರಗಿ, ಗದಗ್**

# ಅಂಬೇಡ್ಕರ್ ಅಪರೂಪದ ನಾಯಕ




**ಬೆಂಗಳೂರು,ಡಿ.6–** ಅಂಬೇಡ್ಕರ್ ಅವರೊಬ್ಬ ಮಹಾನ್ ವ್ಯಕ್ತಿ ಹಾಗೂ ದೇಶ ಕಂಡ ಒಬ್ಬ ಅಪರೂಪದ ನಾಯಕ. ದಲಿತರಿಗೆ ಮಾತ್ರವ ಲ್ಲದೆ ಎಲ್ಲಾ ಶೋಷಿತರಿಗೆ ಗೌರವ ತಂದು ಕೊಡಲು ಪ್ರಯತ್ನಿಸಿದರ ಲ್ಲದೇ, ದೇಶದಲ್ಲಿ ಸಮಾಜಿಕ ನ್ಯಾಯ ಸಿಗದವರ ಪರವಾಗಿ ಹೋರಾಟ ಮಾಡಿದವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿಧಾನಸೌಧದ ಪೂರ್ವ ದಿಕ್ಕಿನಲ್ಲಿರುವ ಸಂವಿಧಾನ ಶಿಲ್ಪಿ ಭಾರತ ರತ್ನ ಮಹಾ ಮಾನವತಾವಾದಿ ಬಾಬಾ ಸಾಹೇಬ ಡಾ ಟಟ ಬಿ ಆರ್ ಅಂಬೇಡ್ಕರ್ ರವರ 69 ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದೇಶದ ಸಂವಿಧಾನ ಶಿಲ್ಪಿ. ಅವರು ದೇಶಕ್ಕೆ ಎಂಥ ಸಂವಿಧಾನದ ಅಗತ್ಯವಿದೆ ಎಂದು ಚಿಂತಿಸಿ , ಇತರೆ ದೇಶಗಳ ಸಂವಿಧಾನವನ್ನು ಅಭ್ಯಾಸ ಮಾಡಿ ದೇಶಕ್ಕೆ ಅಗತ್ಯವಿರುವ ಸಂವಿಧಾನವನ್ನು ಕೊಟ್ಟಿದ್ದಾರೆ. ನಮ್ಮ ಸಾಮಾಜಿಕ ವ್ಯವಸ್ಥೆಯ ಬದಲಾವಣೆಯಾಗಬೇಕು, ಎಲ್ಲರಿಗೂ ಸಮಾನ ಅವಕಾಶಗಳು ದೊರಕಬೇಕು ಹಾಗೂ ಸಾಮಾಜಿಕ ನ್ಯಾಯ ಸ್ಥಾಪನೆಯಾಗಬೇಕು ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ನಮ್ಮ ಸರ್ಕಾರ ಶಾಲಾ ಕಾಲೇಜು ಮಕ್ಕಳಿಗೆ ಇದರ ಅರಿವು ಮೂಡಿಸಲು ಸಂವಿಧಾನ ಪೀಠಿಕೆಯನ್ನು ಬೋಧಿಸಲಾಗುತ್ತಿದೆ. ಸಂವಿಧಾನ ಪ್ರತಿಯೊಬ್ಬರಿಗೂ ಹಕ್ಕು ಮತ್ತು ಬಾಧ್ಯತೆಗಳನ್ನು ನೀಡಿದೆ. ಸಂವಿಧಾನದ ಧ್ಯೇಯೋದ್ದೇಶಗಳು ಎಲ್ಲರಿಗೂ ಅರ್ಥವಾಗಬೇಕು ಎಂಬ ಕಾರಣದಿಂದ ಸರ್ಕಾರ ಇದನ್ನು ಜಾರಿ ಮಾಡಿದೆ ಎಂದರು.ಹಿಂದೂ ಧರ್ಮದಲ್ಲಿರುವ ಸಾಮಾಜಿಕ ವ್ಯವಸ್ಥೆಗೆ ರೋಸಿಹೋಗಿದ್ದರು

# ನೆಹರು ಹೆಸರಿಗೆ ಮಸಿ ಬಳಿಯುವ ಪ್ರಯತ್ನ ಮುಂದುವರೆದಿದೆ : ಸೋನಿಯಾ ಗಾಂಧಿ





**ನವದೆಹಲಿ, ಡಿ.6–** ಜವಾಹರಲಾಲ್ ನೆಹರು ಅವರನ್ನು ನಿಂದಿಸುವ ಯೋಜನೆಯೇ ಇಂದಿನ ಆಡಳಿತ ವ್ಯವಸ್ಥೆಯ ಪ್ರಮುಖ ಗುರಿಯಾಗಿದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೇಳಿದ್ದಾರೆ. ದೇಶದ ಇತಿಹಾಸದಿಂದ ಮೊದಲ ಪ್ರಧಾನಿಯನ್ನು ಅಳಿಸಿಹಾಕಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ಬಿಜೆಪಿಯನ್ನು ಅವರು ಟೀಕಿಸಿದ್ದಾರೆ.

ನೆಹರು ಸೆಂಟರ್ ಇಂಡಿಯಾವನ್ನು ಉದ್ಘಾಟಿಸಲು ನಿನ್ನೆ ಜವಾಹರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನೆಹರು ಅವರನ್ನು ಅವಹೇಳನ ಮಾಡುವ, ವಿರೂಪಗೊಳಿಸುವ, ಕೀಳಾಗಿ ಕಾಣುವ ಮತ್ತು ಮಾನಹಾನಿ ಮಾಡುವ ವ್ಯವಸ್ಥಿತ ಪ್ರಯತ್ನವನ್ನು ಆರೋಪಿಸಿದ್ದಾರೆ.

ಇದರ ಏಕೈಕ ಉದ್ದೇಶವೆಂದರೆ ಅವರನ್ನು ವ್ಯಕ್ತಿತ್ವವಾಗಿ ಕುಗ್ಗಿಸುವುದು ಮಾತ್ರವಲ್ಲದೆ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಸಾರ್ವತ್ರಿಕವಾಗಿ ಗುರುತಿಸಲ್ಪಟ್ಟ ಪಾತ್ರ ಮತ್ತು ಅಭೂತಪೂರ್ವ ಸಮಸ್ಯೆಗಳಿಂದ ಸವಾಲು ಹಾಕಲ್ಪಟ್ಟ ಸ್ವತಂತ್ರ ರಾಷ್ಟ್ರದ ನಾಯಕರಾಗಿ ಅವರ ಆರಂಭಿಕ ದಶಕಗಳು, ಆದರೆ ಇತಿಹಾಸವನ್ನು ಪುನಃ ಬರೆಯುವ ಕಚ್ಚಾ ಮತ್ತು ಸ್ವಾರ್ಥಪರ ಪ್ರಯತ್ನದಲ್ಲಿ ಅವರ ಬಹುಮುಖಿ ಪರಂಪರೆಯನ್ನು ಕೆಡವುವುದು ಎಂದು ಅವರು ಹೇಳಿದರು.ಅಂತಹ ಪ್ರಯತ್ನಗಳನ್ನು ಸಂಪೂರ್ಣವಾಗಿ ಸ್ವಿಕಾರಾರ್ಹವಲ್ಲ ಎಂದು ಕರೆದರು.

ನೆಹರೂ ಅವರನ್ನು ಕೀಳಾಗಿ ಕಾಣುವ ಯೋಜನೆಯ ಹಿಂದಿರುವವರು ಸ್ವಾತಂತ್ರ್ಯ ಚಳವಳಿ ಮತ್ತು ಸಂವಿಧಾನ ರಚನೆಯಲ್ಲಿ ಯಾವುದೇ ಪಾತ್ರ ವಹಿಸದ ಮತ್ತು ಮಹಾತ್ಮ ಗಾಂಧಿಯವರ ಹತ್ಯೆಗೆ ಕಾರಣವಾದ ವಾತಾವರಣವನ್ನು ಸೃಷ್ಟಿಸಿದ ಸಿದ್ಧಾಂತಕ್ಕೆ ಸೇರಿದವರು ಎಂದು ಅವರು ಹೇಳಿದ್ದಾರೆ.

ನೆಹರೂ ಅವರು ಲಕ್ಷಾಂತರ ಭಾರತೀಯ ನಾಗರಿಕರಿಗೆ ಬೆಳಕಿನ ದೀಪವಾಗಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಅಂತಹ ಸ್ಮಾರಕ ವ್ಯಕ್ತಿಯ ಜೀವನ ಮತ್ತು ಕೆಲಸವನ್ನು ವಿಶ್ಲೇಷಿಸುವುದು ಮತ್ತು ಟೀಕಿಸುವುದು ಅನಿವಾರ್ಯವಾಗಿದೆ ಎಂದು ಗಾಂಧಿ ಹೇಳಿದರು ಮತ್ತು ಅದು ನಿಜಕ್ಕೂ ಹಾಗೆಯೇ ಇರಬೇಕು ಎಂದು ಹೇಳಿದರು.

## ಲಿಂಗಸುಗೂರು, ಮಸ್ಕಿ ಮೀನುಗಾರಿಕೆ ಇಲಾಖೆಯಿಂದ ಅರ್ಜಿ ಆಹ್ವಾನ

**ರಾಯಚೂರು,ಡಿ.6–**ಜಿಲ್ಲೆಯ ಲಿಂಗಸುಗೂರು ಹಾಗೂ ಮಸ್ಕಿ ತಾಲೂಕಿನ ಮೀನುಗಾರಿಕೆ ಇಲಾಖೆಯಿಂದ 2025–26ನೇ ಸಾಲಿನಲ್ಲಿ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ಮಾರ್ಗಸೂಚಿಯನ್ವಯ ಮಹತ್ವಕಾಂಕ್ಷಿ ಯೋಜನೆಯಾದ ಧರ್ತಿ ಆಭಾ ಜನ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ ಯೋಜನೆಯಡಿ ತಾಜಾ ಮೀನು ಮಾರಾಟ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಲಿಂಗಸೂಗೂರು ತಾಲೂಕಿನ ತೊಡಕಿ, ಕುಮಾರಖೇಡ, ಹಾಲಭಾವಿ, ಹಿರೆ ಉಪ್ಪೇರಿ, ಅಡವಿಭಾವಿ(ನಿ), ರಾಂಪೂರು, ಯಳಗುಂದಿ, ಯರಗೋಡಿ, ಕಡದರಗಡ್ಡಿ, ರಾಮಲೂಟಿ, ಪೈದೊಡ್ಡಿ, ಗೋಲಪಲ್ಲಿ, ಯರಜಂತಿ, ಬಂಡೆಭಾವಿ, ಪೂಲಭಾವಿ, ಹೊಸೂರು ಹಾಗೂ ಮಸ್ಕಿ ತಾಲ್ಲೂಕಿನ ಕಾಟಗಲ್, ಉಸ್ಕಿಹಾಳ, ತಿರ್ಥಭಾವಿ, ಯತಗಲ್, ಕಾಚಾಪೂರು, ಕೋಟೆಕಲ್, ಜಿನ್ನಾಪುರು, ತುಗ್ಗಲದಿನ್ನಿ, ತುಪ್ಪದುರು(ಕೆ), ಗೋನಾವಾರ್, ಬಸ್ಸಾಪುರು, ಹೂವಿನಭಾವಿ, ಬುದ್ದಿನಿ(ಸಾ), ಗುಡಿಹಾಳ, ಮಟ್ಟೂರು, ಕುಣಿಕೆಲ್ಲೂರು, ಮಿಟ್ಟೆಕೆಲ್ಲೂರು, ಸಂತೆಕೆಲ್ಲೂರು, ಮುಸಲಿಕಾರಲಕುಂಟಿ, ಬೇಡರಕಾರಲಕುಂಟಿ, ಅಂಕುಶದೊಡ್ಡಿ, ಮುದವಾಳ, ಡಬ್ಬೇರಮಡು, ಮಾರಲದಿನ್ನಿ, ಮೂಡಲದಿನ್ನಿ, ಜಕ್ಕೇರಮಡು, ವ್ಯಾಸನಂದಿಹಾಳ, ಕನ್ನಾಳ, ತಿಮ್ಮಾಪೂರು, ದಿಗ್ಗನಾಯಕನಭಾವಿ, ಬೆನಕನಾಳ, ಬೆಲ್ಲದಮರಡಿ, ವೆಂಕಟಾಪೂರು, ನಾಗರಬೆಂಚಿ, ಅಂತರಗಂಗಿ, ಮ್ಯಾದರಾಳ, ಮೇದಕಿನಾಳ, ಬೈಲಗುಡ್ಡ, ಹಡಗಲಿ, ದೇಸಾಯಿ ಬೋಗಾಪುರು, ಯರದೊಡ್ಡಿ, ತಲೆಖಾನ, ಯಕ್ಲಾಸ್‌ಪುರ, ವಟಗಲ್, ನೇಲ್ಕೋಲಾ, ಅಮೀನಗಡ, ಪಾಮನಕೆಲ್ಲೂರು, ಆನಂದಗಲ್, ರ‍್ವಾಪೂರು, ಬೆಂಚಮರಡಿ, ಇಲಾಲಪುರ, ಗುಡಿಹಾಳ, ಚಿಲಕರಾಗಿ, ಇರಕಲ್, ಬಸ್ಸಾಪುರ, ಜಂಗಮರಹಳ್ಳಿ, ಯದ್ದಲದಿನ್ನಿ, ರಾಮರಲದಿನ್ನಿ, ಹಾಲಾಪುರ, ಹಿರೆಕಡಬೂರು, ರಾಮಲದಿನ್ನಿ, ಕಬ್ಬೇರಹಾಳ, ತೋರಣದಿನ್ನಿ, ಗೂಗೆಹೆಬಾಳ, ಚಿಕ್ಕಲದಿನ್ನಿ, ಮಲ್ಕಾಪೂರು, ಮರಕಂದಿನ್ನಿ, ಸುಂಕನೂರು, ಮಲ್ಲದಗುಡ್ಡ, ಡೊನ್‌ಮರಡಿ, ಚಿಂಚರಕಿ ಗ್ರಾಮಗಳಿಗೆ ಯೋಜನೆಯಡಿ ಪರಿಶಿಷ್ಟ ಪಂಗಡಕ್ಕೆ (ಎಸ್.ಟಿ) ಸೇರಿದವರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಯೋಜನೆಯಡಿ ಜಿಲ್ಲೆಗೆ ನಿಗದಿಯಾದ ಗುರಿಗಳಾದ ದ್ವಿಚಕ್ರ ವಾಹನ–23, ತ್ರಿಚಕ್ರ ವಾಹನ–04 ಮತ್ತು ನೇರ ಮೀನು ಮಾರಾಟ–02 ಘಟಕಗಳನ್ನು ಅನುಷ್ಟಾನಗೊಳಿಸಲು ಕೇಂದ್ರ ಸರಕಾರವು ನೀಡಿರುವ ಪಟ್ಟಿಯಲ್ಲಿರುವ ಗ್ರಾಮಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಆಸಕ್ತರು ಅರ್ಜಿಯನ್ನು ಡಿಸೆಂಬರ್ 24ರೊಳಗಾಗಿ ಸಲ್ಲಿಸಬಹುದಾಗಿದೆ.

ಆಸಕ್ತ ಅರ್ಜಿದಾರರು ಹೆಚ್ಚಿನ ವಿವರಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು ಲಿಂಗಸೂಗೂರು ತಾಲ್ಲೂಕು ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ಲಿಂಗಸುಗೂರು ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡೇ ನಲ್ಮ್ ಯೋಜನೆ ಅಕ್ರಮ ತನಿಖೆಗೆ ಆಗ್ರಹ



**ಕಲಬುರಗಿ,ಡಿ.6–** ಮಹಾನಗರ ಪಾಲಿಕೆಯ ಡೇ ನಲ್ಮ್ ( ದೀನದಯಾಳ್ ಅಂತ್ಯೋದಯ ಯೋಜನೆ )ಯೋಜನೆಯಡಿ ಅಕ್ರಮ ನಡೆದಿದೆ ಎಂದು ಕಲ್ಯಾಣ ಕರ್ನಾಟಕ ಆಟೋ ಚಾಲಕರ ಸಂಘದ ಅಧ್ಯಕ್ಷ

ಲಕ್ಷ್ಮೀಕಾಂತ್ ಮಾಲಿಪಾಟೀಲ ಅವರು ಇಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿ ಕೂಡಲೇ ಸೂಕ್ತ ತನಿಖೆ ನಡೆಸಿ ಅಧಿಕಾರ ದುರುಪಯೋಗ ಮಾಡಿಕೊಂಡ ಅಧಿಕಾರಿ, ಸಿಬ್ಬಂದಿಗಳ ಅಮಾನತಿಗೆ ಆಗ್ರಹಿಸಿದರು.

ಸರಕಾರ ಕರೆದಿರುವ ಅರ್ಜಿ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ಮಂಜೂರು ಮಾಡಲಾಗಿದೆ ಎಂದ ಅವರು ಯೂನಿಯನ್ ಬ್ಯಾಂಕಿನವರು ಮತ್ತು ಮಹಾನಗರ ಪಾಲಿಕೆಯ ಅಧಿಕಾರಿಗಳು ಹೊಂದಾಣಿಕೆ ಮಾಡಿಕೊಂಡು ಯೂನಿಯನ್ ಬ್ಯಾಂಕಿನಲ್ಲಿ ಸುಮಾರು 270 ಜನರಿಗೆ ಲೋನ್ ಮಾಡಿದ್ದಾರೆ. ಆದ್ದರಿಂದ ಯೂನಿಯನ್ ಬ್ಯಾಂಕ್ ವಿರುದ್ದ ಅಧಿಕಾರ ದುರುಪಯೋಗದ ಅಡಿಯಲ್ಲಿ ಪ್ರಕರಣ ದಾಖಲಿಸಬೇಕು.

ಬ್ಯಾಂನವರು ಮಂಜೂರಾತಿ ಪತ್ರ ನೀಡುವದಕಿಂತ ಮೊದಲೇ ಮಹಾನಗರ ಪಾಲಿಕೆಯ ಡೇ ನಲ್ಮ್

ಯೋಜನಾಧಿಕಾರಿ ಉಪಸಾರಿಗೆಯ ಆಯುಕ್ತಕರಿಗೆ ಲೆಟರ್ ಟೈಪ್ ಮಾಡಿ ಆಯುಕ್ತಕರ ಸಹಿ ತೆಗೆದುಕೊಂಡಿದ್ದಾರೆ.ಸರಕಾರದ 430 ಗುರಿಯಲ್ಲಿ ಸುಮಾರು 230 ಮುಸ್ಲಿಮ್ ಸಮುದಾಯಕ್ಕೆ ಸೇರಿದವರನ್ನು

ಆಯ್ಕೆ ಮಾಡಿದ್ದಾರೆ ಇದು ಯಾವ ಆಧಾರದ ಮೇಲೆ ಮಾಡಿರುತ್ತಾರೆ ಎಂಬುದನ್ನು ತನಿಖೆ ಮಾಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಜುಕುಮಾರ ದಸ್ತಾಪುರ,ಶ್ರೀಮಂತ ಬೋಳೆವಾಡ,ಹಣಮಂತ ಶೇರಿ ಸೇರಿದಂತೆ ಹಲವರಿದ್ದರು.

## ಯೋಗಾಭ್ಯಾಸದಿಂದ ಮಕ್ಕಳಲ್ಲಿ ಏಕಾಗ್ರತೆ, ನೆನಪಿನ ಶಕ್ತಿ ವೃದ್ಧಿ : ಅನ್ನದಾನಯ್ಯ



**ಮಾನ್ವಿ,ಡಿ.6–**ಯೋಗ ಸನ್ನಿಧಿ ಜ್ಞಾನವಿದ್ಯಾಪೀಠ ಟ್ರಸ್ಟ್ ವತಿಯಿಂದ ಸರ್ವೋದಯ ಪಬ್ಲಿಕ್ ಪ್ರೌಢ ಶಾಲೆಯಲ್ಲಿ ಒಂದು ದಿನದ ಯೋಗ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಯೋಗ ಗುರು ಅನ್ನದಾನಯ್ಯ ಅವರು, ಯೋಗಾಭ್ಯಾಸದಿಂದ ಮಕ್ಕಳಲ್ಲಿ ಏಕಾಗ್ರತೆ ಮತ್ತು ನೆನಪಿನ ಶಕ್ತಿಗೆ ಉತ್ತಮ ಅಭ್ಯಾಸವಾಗಿದ್ದು, ವಿದ್ಯಾರ್ಥಿಗಳು ಇದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಶಾಲೆಯ ಮಕ್ಕಳಿಗೆ ಪ್ರಥಮವಾಗಿ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾದ ಯೋಗಾಭ್ಯಾಸದ ಅವಧಿಯಲ್ಲಿ, ಮೊದಲು ಯೋಗಭ್ಯಾಸದ ಕುರಿತು ಉಪನ್ಯಾಸವನ್ನು ನೀಡಲಾಯಿತು. ನಂತರ ಉತ್ಕಟಾಸನ, ಗೋಮುಖಾಸನ, ಹಿಮ್ಮಡಿ ಶ್ವಾಸಭ್ಯಾಸ ಮತ್ತು ವೀರಭದ್ರಸನಗಳಂತಹ ಪ್ರಮುಖ ಯೋಗಾಸನಗಳನ್ನು ತರಬೇತಿ ನೀಡಿ, ಅವುಗಳ ಕುರಿತು ಮಾಹಿತಿಗಳನ್ನು ಒದಗಿಸಲಾಯಿತು. ಪ್ರಾಣಾಯಾಮಗಳಲ್ಲಿ ವಿಶೇಷವಾಗಿ ಉಸಿರಾಟದ ಶ್ವಾಸ ಮತ್ತು ಪ್ರಶ್ವಾಸದ ಅಭ್ಯಾಸ ಹಾಗೂ ಓಂಕಾರದ ಅಭ್ಯಾಸದಂತಹ ಹಂತಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡಲಾಯಿತು. ಅಂತಿಮವಾಗಿ, ಧ್ಯಾನದ ಬಗ್ಗೆಯೂ ಅಭ್ಯಾಸವನ್ನು ಮಾಡಿಸಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ಉಪನ್ಯಾಸಕರಾದ ಮೈಬುಬ್ ಖಾನ್ ಅವರು ಮಾತನಾಡಿ, ಯೋಗವು ನಮ್ಮ ದೈನಂದಿನ ಚಟುವಟಿಕೆಯ ಒಂದು ಭಾಗ ಎಂದು ತಿಳಿಸಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ರಂಗಪ್ಪ, ಶಿಕ್ಷಕಿಯರಾದ ತೇಜಸ್ವಿರಿ, ಶರತ್ ಹಾಗೂ ಶಾಲಾ ಮಕ್ಕಳು ಈ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

## ಮಕ್ಕಳ ಪ್ರತಿಭೆ ಹೊರ ತರಲು ಪ್ರತಿಭಾ ಕಾರಂಜಿ ಉತ್ತಮ ವೇದಿಕೆ : ಚಂದ್ರಶೇಖರ್ ದೊಡ್ಡಮನಿ




**ಸಿರವಾರ, ಡಿ.6–**ಮಕ್ಕಳಲ್ಲಿನ ವಿಶೇಷ ಪ್ರತಿಭೆಗಳನ್ನು ಹೊರ ತರಲು ಸರ್ಕಾರ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಂಡಿರುವ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉತ್ತಮ ವೇಧಿಕೆಯಾಗಿದೆ ಎಂದು ಕ್ಷೇತ್ರ ಶಿಕ್ಷಣಾ ಧಿಕಾರಿ ಚಂದ್ರಶೇಖರ್ ದೊಡ್ಡಮನಿ ಹೇಳಿದರು. ಪಟ್ಟಣದ ಸಂದೀಪನ ಶಾಲೆಯಲ್ಲಿ ಏರ್ಪಡಿಸಿದ್ದ ಹರವಿ ಹಾಗೂ ಸಿರವಾರ ವಲಯ ಮಟ್ಟದ ಪ್ರಾಥಮಿಕ ಶಾಲೆಗಳ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಪ್ರತಿಯೊಂದು ಮಕ್ಕಳಲ್ಲಿ ವಿಭಿನ್ನವಾದ ಪ್ರತಿಭೆ ಅಡಕವಾಗಿರುತ್ತೆ. ಮಕ್ಕಳಲ್ಲಿ ಸೋಲು ಗೆಲು ಮುಖ್ಯವಾಗುವದಿಲ್ಲ. ಬದಲಿಗೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಿಕೆ ಬಹು ಮುಖ್ಯವಾಗಿರುತ್ತದೆ. ತೀರ್ಪುಗಾರರು ಉತ್ತಮವಾದ ನಿರ್ಣಯಗಳನ್ನು ಕೈಗೊಂಡು ಪ್ರತಿಭಾವಂತ ಮಕ್ಕಳಿಗೆ ನ್ಯಾಯ ಕಲ್ಪಿಸಬೇಕು ಎಂದು ಕಿವಿಮಾತು ಹೇಳಿದರು. ಇದೆ ವೇಳೆ ವಿವಿಧ ಶಾಲೆಯ ವಿದ್ಯಾರ್ಥಿಗಳು ಛದ್ಮವೇಷ, ನೃತ್ಯ, ರಂಗೋಲಿ, ಗಾಯನ, ಕಥೆ ಸೇರೆ ಅನೇಕ ರೀತಿಯ ಪ್ರತಿಭೆಗಳನ್ನು ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಹಿರಿಯ ವಾಣಿಜ್ಯೋಧ್ಯಮಿಗಳಾದ ಚುಕ್ಕಿ ಸೂಗಪ್ಪ ಸಾಹುಕಾರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಆರೀಫಮೀಯಾ, ಮಾಜಿ ಅಧ್ಯಕ್ಷ ಅಯ್ಯನಗೌಡ ಎರ್ರಡ್ಡಿ, ಸಿ.ಆರ್.ಪಿ ದಿವಾಕರ್, ಶಿಕ್ಷಕರ ಸಂಘದ ಅಧ್ಯಕ್ಷ ಜಾಹೀದ್ ಪಾಷ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮೌನೇಶ ಹಣಗಿ, ಖಾಸಗಿ ಶಿಕ್ಷಣ ಸಂಸ್ಥೆಗಳು ಒಕ್ಕೂಟದ ಜಿಲ್ಲಾ ಅಧ್ಯಕ್ಷ ಟಿ.ಬಸವರಾಜ, ಎಸ್ಸಿ, ಎಸ್ಟಿ ನೌಕರರ ಸಂಘದ ಅಧ್ಯಕ್ಷ ಯೇಸುಮಿತ್ರ, ಲಿಟಲ್ ಎಂಜಿಲ್ ಶಾಲೆಯ ಅಧ್ಯಕ್ಷ ಚಂದ್ರಶೇಖರ್ ರೆಡ್ಡಿ ಹರವಿ, ಜ್ಞಾನಗಂಗಾ ಶಾಲೆಯ ಅಧ್ಯಕ್ಷ ವೆಂಕಟರೆಡ್ಡಿ ಬಲ್ಕಲ್, ಜ್ಞಾನಭಾರತಿ ಶಾಲೆಯ ಅಧ್ಯಕ್ಷ ಪ್ರಕಾಶ ಪಾಟೀಲ್, ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಸೇರಿದಂತೆ ಸಿರವಾರ ಹಾಗೂ ಹರವಿ ವಲಯಗಳ ವಿವಿಧ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

## ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಬಲವರ್ಧನೆಗಾಗಿ ಶ್ರಮಿಸಿ– ಶಾಸಕ ಆರ್ ಬಸನಗೌಡ ತುರ್ವಿಹಾಳ




**ಮಸ್ಕಿ,ಡಿ.6–** ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳಿಗೆ ನೂತನ ಅಧ್ಯಕ್ಷರನ್ನು ನೇಮಿಸುವ ಮೂಲಕ ಸಮತೋಲಿತ ಕಾಪಾಡಿದ್ದು, ಪಕ್ಷದ ಕಾರ್ಯಕರ್ತರು ಹುಮ್ಮಸ್ಸಿನಿಂದ ಮುಂದಿನ ಗ್ರಾ.ಪಂ, ತಾ.ಪಂ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯ ಎದುರಿಸಬೇಕೆಂದು ಶಾಸಕ ಆರ್.ಬಸನಗೌಡ ತುರವಿಹಾಳ ಹೇಳಿದರು.

ಮಸ್ಕಿ ಪಟ್ಟಣದಲ್ಲಿ ಬ್ಲಾಕ್ ಕಾಂಗ್ರೆಸ್‌ವತಿಯಿಂದ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಆಯೋಜಿಸಲಾಗಿದ್ದ ವಿವಿಧ ಘಟಕಗಳ ಪದಾಧಿಕಾರಿಗಳ ನೇಕಮ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಕಾಂಗ್ರೆಸ್ ಪಕ್ಷಕ್ಕೆ ಸುಧೀರ್ಘ ಇತಿಹಾಸವಿದೆ. ಪಕ್ಷ ಸಮುದ್ರವಿದ್ದಂತೆ. ಪಕ್ಷದ ಕಾರ್ಯಕರ್ತರು ಅಧಿಕಾರ ಸಿಕ್ಕಿಲ್ಲವೆಂದು ಬೇಸರಪಟ್ಟುಕೊಳ್ಳದೆ ಮುಂದಿನ ಚುನಾವಣೆಗಳಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕಾರ್ಯಕರ್ತರು ಶ್ರಮಿಸಬೇಕೆಂದು ಹೇಳಿದರು.

ನಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ ಮಾತನಾಡಿ ಅಧಿಕಾರಕ್ಕೆ ಬರುವ ಮುನ್ನಾ ಘೋಷಣೆ ಮಾಡಿದಂತಹ ಗ್ಯಾರಂಟಿ ಯೋಜನೆಗಳನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಜಾರಿಗೊಳಿಸಿದೆ. ಆದ್ದರಿಂದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕ್ಷೇತ್ರದಲ್ಲಿ ಪಕ್ಷಕ್ಕೆ ಇನ್ನಷ್ಟು ಬಲ ತುಂಬಿಸಲು ವಿವಿಧ ಘಟಕಗಳಿಗೆ ನೂತನ ಅಧ್ಯಕ್ಷರುಗಳನ್ನು ನೇಮಿಸಲಾಗಿದೆ. ನೂತನ ಅಧ್ಯಕ್ಷರುಗಳು ಪಕ್ಷದ ಕಾರ್ಯಕರ್ತರ ಜತೆಗೂಡಿ ಮುಂಬರುವ ಚುನಾವಣೆಗಳಲ್ಲಿ ಗ್ಯಾರಂಟಿ ಯೋಜನೆಗಳ ಮೂಲಕ ಮನೆ ಮನೆಗೆ ತೆರಳಿ ಪ್ರತಿಯೊಬ್ಬರಿಗೆ ತಿಳಿಸುವ ಕೆಲಸವಾಗಬೇಕಾಗಿದೆ ಎಂದು ಹೇಳಿದರು.

**ವಿವಿಧ ಘಟಕಗಳಿಗೆ ನೇಮಕ:** ಪರಿಶಿಷ್ಟ ಜಾತಿ ವಿಭಾಗದ ನಗರ ಘಟಕದ ಅಧ್ಯಕ್ಷರಾಗಿ ಬಸಪ್ಪ ಜಂಗಮರಹಳ್ಳಿ, ಗ್ರಾಮೀಣ ಘಟಕದ ಅಧ್ಯಕ್ಷರಾಗಿ ಸೋಮನಾಥ ತುರವಿಹಾಳ, ಎಸ್‌ಟಿ ಘಟಕದ ನಗರ ಅಧ್ಯಕ್ಷರಾಗಿ ರಮೇಶ ಕಾಸ್ಲಿ, ಗ್ರಾಮೀಣ ಘಟಕದ ಯಂಕೋಬ ಕನ್ನಟಗಿ, ಪ್ರಚಾರ ಸಮಿತಿಯ ನಗರ ಘಟಕದ ಅಧ್ಯಕ್ಷರಾಗಿ ಜಯಪ್ಪ ಮೆದಿಕಿನಾಳ, ಗ್ರಾಮೀಣ ಘಟಕದ ಅಧ್ಯಕ್ಷರಾಗಿ ಸಂಜಯಕುಮಾರ ಬಳಗಾನೂರ ಇವರುಗಳನ್ನು ನೇಮಿಸಿದ್ದಾರೆ.

ಈ ಸಂದರ್ಭದಲ್ಲಿ ಬ್ಲಾಕ್ ಗ್ರಾಮೀಣ ಘಟಕದ ಅಧ್ಯಕ್ಷ ಹನುಮಂತಪ್ಪ ಮುದ್ದಾಪೂರು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರುಗಳಾದ ಅಂದಾನಪ್ಪ ಗುಂಡಳ್ಳಿ, ಆದನಗೌಡ ಸಂತೆಕೆಲ್ಲೂರು, ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಮಹಿಬೂಬ ಸಾಬ ಮುದ್ದಾಪೂರು, ಕೆಪಿಸಿಸಿ ಸದಸ್ಯರಾದ ಸಿದ್ಧನಗೌಡ ಮಾಟೂರು, ಅಲ್ಪಸಂಖ್ಯಾತರ ವಿಭಾಗದ ನಗರ ಘಟಕದ ಅಧ್ಯಕ್ಷ ನಿಸ್ಸಾರ ಅಹ್ಮದ್, ಗ್ರಾಮೀಣ ಘಟಕದ ಅಧ್ಯಕ್ಷ ಹುಸೇನ್ ಭಾಷಾ ಬಳಗಾನೂರು ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿದ್ದರು

## ರವಿರಾಜ್ ಗೆ ಪಿಎಚ್.ಡಿ. ಪದವಿ ಪ್ರಧಾನ:



**ಮಾನ್ವಿ,ಡಿ.6–** ಪಟ್ಟಣದ ರವಿರಾಜ್ ಡಿ ಅವರು ಗಣಿತಶಾಸ್ತ್ರ ವಿಭಾಗದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದುಕೊಂಡು ಜಿಲ್ಲೆಗೆ ಹೆಮ್ಮೆಯನ್ನು ತಂದಿದ್ದಾರೆ.

ರವಿರಾಜ್ ಡಿ ಅವರು ರಾಜಸ್ಥಾನದ ಅಲ್ವಾರ ಸನ್ ರೈಸ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.

ಗಣಿತಶಾಸ್ತ್ರ ವಿಭಾಗದಲ್ಲಿ ಡಾ. ಗೌತಮ್ ಕುಮಾರ್ ರಜಪೂತ ಅವರ ಮಾರ್ಗದರ್ಶನದಲ್ಲಿ, ರವಿರಾಜ್ ಡಿ ಅವರು "ALGEBRAIC GEOMETRY AND CODING THEORY: ERROR – CORRECT–ING CODES AND ALGEBRAIC CURVES" ಎಂಬ ಪ್ರಮುಖ ವಿಷಯದ ಕುರಿತು ತಮ್ಮ ಸಂಶೋಧನಾ ಮಹಾಪ್ರಬಂಧವನ್ನು ಯಶಸ್ವಿಯಾಗಿ ಮಂಡಿಸಿದರು.

ಅಲ್ವಾರ ಸನ್ ರೈಸ್ ವಿಶ್ವವಿದ್ಯಾಲಯವು ಅವರಿಗೆ ಪಿಎಚ್.ಡಿ. ಪದವಿಯನ್ನು ಪ್ರಧಾನ ಮಾಡಿದೆ.

## ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇ.ಡಿ.ಕಿರುಕುಳ ನೀಡುತ್ತಿದೆ : ಡಿಕೆಶಿ



**ಬೆಂಗಳೂರು, ಡಿ.6–** ನ್ಯಾಷನಲ್ ಹೆರಾಲ್ಡ್ ಹಾಗೂ ಯಂಗ್ ಇಂಡಿಯಾ ಸಂಸ್ಥೆಗಳಿಗೆ ದೇಣಿಗೆ ನೀಡಿದ್ದಕ್ಕೆ ಇಡಿ ಸಮನ್ಸ್ ನೀಡಿದೆ. ಆ ಮೂಲಕ ನಮಗೆ ಕಿರುಕುಳ ನೀಡಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಮೊದಲಿನಿಂದಲೂ ತನಿಖೆಗೆ ಸಹಕರಿಸುತ್ತಲೇ ಬಂದಿದ್ದೇವೆ. ಇಲ್ಲಿ ಯಾವುದೇ ಮುಚ್ಚುಮರೆಯಿಲ್ಲ. ಇಷ್ಟೆಲ್ಲಾ ಆದರೂ ಇ.ಡಿ. ಚಾರ್ಜ್ ಶೀಟ್ ಹಾಕಿರೋದು ಏಕೆ ಎಂಬುದೇ ಗೊತ್ತಿಲ್ಲ. ಇದರಲ್ಲಿ ಪೊಲೀಸರು ಪ್ರಕರಣ ದಾಖಲಿಸುವ ಅಗತ್ಯ ಇರಲಿಲ್ಲ. ನಾವು ಕಾನೂನಾತ್ಮಕವಾಗಿ ನ್ಯಾಯಲಯದಲ್ಲಿ ಹೋರಾಟ ಮಾಡುತ್ತೆ?ವೆ ಎಂದರು.ಡಿ.19 ರ ಒಳಗೆ ಪೊಲೀಸರಿಗೆ ಮಾಹಿತಿ ನೀಡಬೇಕೆಂದು ನನಗೆ ಹಾಗೂ ನನ್ನ ತಮ ಡಿ.ಕೆ.ಸುರೇಶ್ ಗೆ ಇಡಿ ಸಮನ್ಸ್ ನೀಡಿದೆ. ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ನಾವು ಹಿಂದೆಯೇ ಉತ್ತರ ಕೊಟ್ಟಿದ್ದೇವೆ. ಆದರೂ ನಮಗೆ ಸಮನ್ಸ್ ನೀಡಿರುವುದು ಆಘಾತಕಾರಿ. ಇದು ಸರಿಯಲ್ಲ. ಇದನ್ನು ನಾನು ಖಂಡಿಸುತ್ತೇನೆ ಎಂದಿದ್ದಾರೆ.

ದೆಹಲಿ ಪೊಲೀಸರು ಡಿಸೆಂಬರ್ 19 ನೇ ತಾರೀಕಿನ ಒಳಗೆ ಮಾಹಿತಿ ನೀಡಬೇಕು ಎಂದು ತಿಳಿಸಿದ್ದಾರೆ. ನಾವು ತೆರಿಗೆ ಪಾವತಿ ಮಾಡುತ್ತಿದ್ದೇವೆ. ನಮ್ಮ ಹಣವನ್ನು ನಮಗೆ ಬೇಕಾದವರಿಗೆ ನೀಡುತ್ತೇವೆ. ಕಿರುಕುಳ ನೀಡಲು ಪಿಎಂಎಲ್ಎ ಪ್ರಕರಣ ಕೂಡ ದಾಖಲಿಸಿದ್ದರು. ಆನಂತರ ಏನಾಯಿತು? ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಬೆಂಬಲಿಗರಿಗೆ ಕಿರುಕುಳ ನೀಡುವುದು, ಜತೆಗೆ ಗೊಂದಲ ಮೂಡಿಸುವುದು ಇದರ ಉದ್ದೇಶ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ನ್ಯಾಷನಲ್ ಹೆರಾಲ್ಡ್ ಹಾಗೂ ಯಂಗ್ ಇಂಡಿಯಾ ಸಂಸ್ಥೆಗಳಿಗೆ ದೇಣಿಗೆ ನೀಡಿದ್ದಕ್ಕೆ ಇಡಿ ನೋಟಿಸ್ ನೀಡಲಾಗಿದೆ. ನ್ಯಾಷನಲ್ ಹೆರಾಲ್ಡ್, ಯಂಗ್ ಇಂಡಿಯಾ ಇವು ನಮ್ಮ ಕಾಂಗ್ರೆಸ್ ಪಕ್ಷದ ಸಂಸ್ಥೆಗಳು. ನಾವು ಕಾಂಗ್ರೆಸ್ಸಿಗರಾದ ಕಾರಣಕ್ಕೆ ಈ ಸಂಸ್ಥೆಗಳು ಕಷ್ಟ ಕಾಲದಲ್ಲಿದ್ದಾಗ ನಮ ಟ್ರಸ್ಟ್ ಗಳಿಂದ ದೇಣಿಗೆ ನೀಡಿದ್ದೇವೆ. ನಮಂತೆ ಅನೇಕ ಜನರು ಸಹಾಯ ಮಾಡಿದ್ದಾರೆ ಎಂದರು.

ಶುಕ್ರವಾರ ನನಗೆ ಹಾಗೂ ಸುರೇಶ್ ಅವರಿಗೆ ನೋಟಿಸ್ ಬಂದಿದೆ. ಆತ ಸಂಸದನಾದ ಸಮಯದಲ್ಲಿ ಒಂದಷ್ಟು ಹಣ ದೇಣಿಗೆ ನೀಡಿದ್ದ. ನೋಟಿಸ್ ಅನ್ನು ವಿವರವಾಗಿ ತಿಳಿದುಕೊಂಡು ಕಾನೂನಾತಕವಾಗಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆ ಎಂದರು.

ಸುದ್ದಿ ಮತ್ತು ಜಾಹೀರಾತಿಗಾಗಿ
ಸಂಪರ್ಕಿಸಿ
9743497111,9743496111

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H